# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಸೋಮವಾರ, ಸೆಪ್ಟಂಬರ್ 02, 2024

ಸಂಪುಟ : 51 ಸಂಚಿಕೆ : 111 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




ಚಿತ್ರ: ರಫೀಕ್, ಜನತಾವಾಣಿ

**ಅಂದದ ಗಣಪ ಮನೆಗೆ ಬಾರಪ್ಪಾ..**

ಗಣೇಶ ಚತುರ್ಥಿ ಆಚರಣೆಗೆ ವಾರವಷ್ಟೇ ಉಳಿದಿದ್ದು, ಸ್ಥಳೀಯ ಕಲಾವಿದರೂ ಸೇರಿದಂತೆ ಹೊರ ರಾಜ್ಯಗಳಿಂದಲೂ ಗಣೇಶನ ಮೂರ್ತಿಗಳನ್ನು ತಂದು ಮಾರಾಟ ಮಾಡಲಾಗುತ್ತಿದೆ. ಜನತೆ ಅಂದದ ಮೂರ್ತಿಯನ್ನು ಹಬ್ಬದ ದಿನ ತೆಗೆದುಕೊಂಡು ಹೋಗಲು ಈಗಲೇ ಆರಿಸಿ ಮುಂಗಡ ಹಣ ನೀಡಿ ತೆರಳುತ್ತಿದ್ದಾರೆ.

# ಮಠಕ್ಕೆ ಉತ್ತರಾಧಿಕಾರಿ ನೇಮಿಸಿ ಟ್ರಸ್ಟ್ ಡೀಡ್ ರದ್ದುಗೊಳಿಸಿ

ದಾವಣಗೆರೆ, ಸೆ.1 - ಸಿರಿಗೆರೆ ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಮಠದ ಉತ್ತರಾಧಿಕಾರಿಯನ್ನು ನೇಮಿಸಬೇಕು ಹಾಗೂ ಏಕವ್ಯಕ್ತಿ ಟ್ರಸ್ಟ್ ಡೀಡ್ ರದ್ದುಗೊಳಿಸಬೇಕು ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ್ ಒತ್ತಾಯಿಸಿದ್ದಾರೆ.

ಅಪೂರ್ವ ರೆಸಾರ್ಟ್‌ನಲ್ಲಿ ಮಠದ ವಿಷಯಗಳ ಸಮಾಲೋಚನೆಗಾಗಿ ಕರೆದಿದ್ದ ಮುಖಂಡರ ಸಭೆಯ ನಂತರ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಹಿರಿಯ ಜಗದ್ಗುರುಗಳಾದ ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರು 60ನೇ ವಯಸ್ಸಿನಲ್ಲಿ ಪೀಠದಿಂದ ನಿವೃತ್ತರಾಗಿದ್ದರು. ಈಗಿನ ಪೀಠಾಧೀಶರಾದ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು 65ನೇ ವಯಸ್ಸಿನಲ್ಲಿ ನಿವೃತ್ತರಾಗುವುದಾಗಿ ಘೋಷಿಸಿದ್ದರು. ಆದರೆ, ನಂತರ ನಿವೃತ್ತಿಯಾಗಿರಲಿಲ್ಲ ಎಂದರು.

ನಿವೃತ್ತನಾಗಲು ತಾವು ಸರ್ಕಾರಿ ನೌಕರರೇ ಅಥವಾ ರಾಜಕಾರಣಿಯೇ? ಎಂದು ಈಗ ಹೇಳುತ್ತಿದ್ದಾರೆ. ಅವರ ಮಾತಿಗೆ ಅವರೇ ತಪ್ಪಿದ್ದಾರೆ. ಹಿರಿಯ ಜಗದ್ಗುರುಗಳ ಆಣತಿಯಂತೆ ನಿವೃತ್ತಿ ಎಂದವರು, ಮಾತಿನಂತೆ ನಡೆದುಕೊಂಡಿಲ್ಲ ಎಂದರು.

1990ರ ಟ್ರಸ್ಟ್ ಡೀಡ್ ಸರ್ವಾಧಿಕಾರಿ ಸ್ವರೂಪದಲ್ಲಿದೆ. ಈ ಟ್ರಸ್ಟ್ ಡೀಡ್ ಮೂಲಕ ಉತ್ತರಾಧಿಕಾರಿಯ ಏಕಪಕ್ಷೀಯ ಆಯ್ಕೆ ನಡೆಯುವುದು ಬೇಡ. ಈ ಟ್ರಸ್ಟ್ ಡೀಡ್ ರದ್ದು ಮಾಡಿದರೆ, ಉತ್ತರಾಧಿಕಾರಿ ಆಯ್ಕೆ ಬಗ್ಗೆ ನ್ಯಾಯಾಲಯದಲ್ಲಿರುವ ಪ್ರಕರಣವೂ ಬಿದ್ದು ಹೋಗುತ್ತದೆ. 1977ರಲ್ಲಿ (2ನೇ ಪುಟಕ್ಕೆ)

**ಸಿರಿಗೆರೆ ಜಗದ್ಗುರುಗಳಿಗೆ 'ಬಂಡಾಯ ಭಕ್ತರ' ಆಗ್ರಹ**



## 2,000 ಕೋಟಿ ರೂ. ಆಸ್ತಿಯ ದೊಡ್ಡ ಬಂಡವಾಳಶಾಹಿ: ಬಿ.ಸಿ. ಪಾಟೀಲ್

ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ನಮ್ಮನ್ನು ಬಂಡವಾಳಶಾಹಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು ಹಾಗೂ ಮಠದ ವಿರೋಧಿಗಳು ಎಂದು ಟೀಕಿಸಿದ್ದಾರೆ. ಆದರೆ, ನಾವು ಮಠದ ವಿರೋಧಿಗಳಲ್ಲ ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನ ಶ್ರೀಮತ್ ಪಾಲ್ಕುರಿಕೆ - ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಎಂಬುದು ಮಠದ ಮೂಲ ಹೆಸರು. 1990ರ ಟ್ರಸ್ಟ್ ಡೀಡ್ ಮೂಲಕ ಮಠದ ಹೆಸರನ್ನು ಬದಲಿಸಿ, ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಎಂದು ಬದಲಿಸಲಾಗಿದೆ ಎಂದು ಪಾಟೀಲ್ ಹೇಳಿದರು.

ಅಷ್ಟೇ ಅಲ್ಲದೇ, ಈ ಟ್ರಸ್ಟ್ ಡೀಡ್‌ನಿಂದ ಹಳೆಯ ಮಠ ಮಾಯ ಆಗಿ ಹೊಸ ಮಠ ಆರಂಭವಾಯಿತು. ಇದು ಈಗ ಶ್ರೀಗಳ ಸ್ವಂತ ಮಠವಾಗಿದೆ. 2 ಸಾವಿರ ಕೋಟಿ ರೂ.ಗಳ ಮಠದ ಆಸ್ತಿಯನ್ನು ಸ್ವಂತ ಅಧಿಕಾರಕ್ಕೆ ಮಾಡಿಕೊಂಡಾಗ, ನಿಮಗಿಂತ ದೊಡ್ಡ ಬಂಡವಾಳಶಾಹಿ ಯಾರಿದ್ದಾರೆ? ಎಂದು ಪ್ರಶ್ನಿಸಿದರು. ರಿಯಲ್ ಎಸ್ಟೇಟ್ ಮಾಡುವವರು ಸ್ಮಗ್ಲರ್‌ಗಳೇನಲ್ಲ. ರಿಯಲ್ ಎಸ್ಟೇಟ್‌ನವರು ತಮ್ಮ ವೃತ್ತಿ ಮಾಡುತ್ತಿದ್ದಾರೆ ಎಂದರು.

## ಅವಕಾಶ ನೀಡದ ಕಾರಣ ಶ್ರೀಗಳ ಭೇಟಿಗೆ ತೆರಳಿಲ್ಲ

ಆ.18ರಂದು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪನವರ ನೇತೃತ್ವದಲ್ಲಿ ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಭೇಟಿ ಮಾಡಲು ನಿಯೋಗದಲ್ಲಿ ತೆರಳಲು ಕಳೆದ ತಿಂಗಳು ಆ.4ರಂದು ನಡೆದ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಆದರೆ, ಖಾಸಗಿ ಭೇಟಿಗೆ ಅವಕಾಶ ಇಲ್ಲ ಎಂದು ಸ್ವಾಮೀಜಿ ತಿಳಿಸಿದ ಕಾರಣ ಮಠಕ್ಕೆ ತೆರಳಲಿಲ್ಲ ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ಉತ್ತರಾಧಿಕಾರಿ ನೇಮಕಕ್ಕೆ ಸಂಬಂಧಿಸಿದಂತೆ ಸಾಧು ಸದ್ಧರ್ಮ ವೀರಶೈವ ಸಮಾಜ ಸಂಘದ ಅಧ್ಯಕ್ಷರಿಗೆ ಪತ್ರ ಬರೆಯುವಂತೆ ಶ್ರೀಗಳು ಹೇಳಿಕೆ ನೀಡಿದ್ದರು. ಹೀಗಾಗಿ ನಾವು ಭೇಟಿಗೆ ತೆರಳಿಲ್ಲ. ಆದರೆ, ನಂತರದಲ್ಲಿ ಆದ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಿದ್ದೇವೆ. ನಮ್ಮ ವಿಚಾರಗಳ ಬಗ್ಗೆ ಸಭೆಗಳನ್ನು ನಡೆಸಿ ಜನರಿಗೆ ತಿಳಿಸುತ್ತಿದ್ದೇವೆ ಎಂದರು.

## ಉತ್ತರಾಧಿಕಾರಿ ನೇಮಿಸಿ, ಪೀಠತ್ಯಾಗಕ್ಕೆ ಒತ್ತಾಯವಿಲ್ಲ

**ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಪೀಠತ್ಯಾಗ ಮಾಡಬೇಕು ಎಂದು ಒತ್ತಾಯಿಸುವುದಿಲ್ಲ. ಅವರು ಉತ್ತರಾಧಿಕಾರಿ ನೇಮಿಸಬೇಕು ಎಂದು ಮಾಜಿ ಶಾಸಕ ವಡ್ನಾಳ್ ರಾಜಣ್ಣ ಹೇಳಿದರು. ಶ್ರೀಗಳು ಮುಂದಿನ ಪೀಠಾಧಿಕಾರಿ ಯಾರೆಂಬುದನ್ನು ಹೇಳಲಿ. ನಂತರ ಅವರೇ ಪೀಠದಲ್ಲಿ ಮುಂದುವರೆಯಲಿ ಎಂದು ಉದ್ಯಮಿ ಅಣಬೇರು ರಾಜಣ್ಣ ಹೇಳಿದರು.**

# ಪಂಚಮಸಾಲಿ ರಾಜ್ಯಾಧ್ಯಕ್ಷರಾಗಿ ಸೋಮನಗೌಡ ಪಾಟೀಲ್


**ಪ್ರಧಾನ ಕಾರ್ಯದರ್ಶಿಯಾಗಿ ಹೊನ್ನಾಳಿ ಪಿ.ಎಂ. ಪಟ್ಟಣಶೆಟ್ಟಿ**

ಹರಿಹರ, ಸೆ.1- ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷರಾಗಿ ಸೋಮನಗೌಡ ಪಾಟೀಲ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಹೊನ್ನಾಳಿ ಪಿ.ಎಂ. ಪಟ್ಟಣಶೆಟ್ಟಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಪಂಚಮಸಾಲಿ ಗುರುಪೀಠದ ಧರ್ಮದರ್ಶಿ ಬಿ.ಸಿ. ಉಮಾಪತಿ, ಮಾಜಿ ಅಧ್ಯಕ್ಷ ಬಸವರಾಜ್ ದಿಂಡೂರು, ಮಠದ ಆಡಳಿತಾಧಿಕಾರಿ ಡಾ. ರಾಜಕುಮಾರ್ ಹೇಳಿದರು.

ನಗರದ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ಪಂಚಮಸಾಲಿ ಸಮಾಜದ ರಾಜ್ಯ ಸಂಘದ ಪದಾಧಿಕಾರಿಗಳ ವತಿಯಿಂದ ನಡೆದ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

ರಾಜ್ಯಾಧ್ಯಕ್ಷರಾಗಿದ್ದ ಜಿ.ಪಿ. ಪಾಟೀಲ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿದ್ದ ಬಿ. ಲೋಕೇಶ್ ರಾಜಿನಾಮೆಯಿಂದ ಈ ಎರಡೂ ಸ್ಥಾನಗಳು ತೆರವಾಗಿದ್ದವು.

ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ಸೋಮನಗೌಡ ಪಾಟೀಲ್ ಮಾತನಾಡಿ, ರಾಜ್ಯ ಪಂಚಮಸಾಲಿ ಸಂಘ ಹಾಗೂ ಟ್ರಸ್ಟ್‌ಗೆ ಚ್ಯುತಿ ಬಾರದಂತೆ ಜವಾಬ್ದಾರಿ ನಿರ್ವಹಿಸಿಕೊಂಡು ಹೋಗುತ್ತೇನೆ. ಹಲವು ಕಾರಣಗಳಿಂದ ಸಮಾಜದ ಚಟುವಟಿಕೆಗಳಿಂದ ದೂರ ಹೋದವರನ್ನು ಮತ್ತೆ ಕರೆ ತರಲು ಪ್ರಯತ್ನಿಸುತ್ತೇನೆ ಎಂದರು. (4ನೇ ಪುಟಕ್ಕೆ)



## ವಂದೇ ಭಾರತ್ ಸ್ಲೀಪರ್ ಮಾದರಿ ಅನಾವರಣ

**ಬೆಂಗಳೂರಿನ ಬಿ.ಇ.ಎಂ.ಎಲ್.ನಲ್ಲಿ ವಂದೇ ಭಾರತ್ ಘಟಕಕ್ಕೆ ಶಿಲಾನ್ಯಾಸ**

ಬೆಂಗಳೂರು, ಸೆ. 1 - ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ವಂದೇ ಭಾರತ್ ಸ್ಲೀಪರ್ ಮಾದರಿಯನ್ನು ಅನಾವರಣಗೊಳಿಸಿದ್ದಾರೆ. ಇಲ್ಲಿನ ಬಿಇಎಂಎಲ್ ಘಟಕದಲ್ಲಿ ಬೋಗಿಯನ್ನು ರೂಪಿಸಲಾಗಿದೆ.

ಮುಂದಿನ 10 ದಿನಗಳ ಕಾಲ ಬೋಗಿಯನ್ನು ತೀವ್ರ ಪರಿಶೀಲನೆಗೆ ಒಳಪಡಿಸಲಾಗುವುದು. ನಂತರ ಅದನ್ನು ಹಳಿಗಳ ಮೇಲೆ ಬಿಟ್ಟು ಮುಂದಿನ ಪರೀಕ್ಷೆ ನಡೆಸಲಾಗುವುದು ಎಂದು ವೈಷ್ಣವ್ ಹೇಳಿದ್ದಾರೆ.

ಮುಂದಿನ ಮೂರು ತಿಂಗಳಲ್ಲಿ ವಂದೇ ಭಾರತ್ ಸ್ಲೀಪರ್ ರೈಲು ಪ್ರಯಾಣಕ್ಕೆ ಲಭ್ಯವಾಗುವ ನಿರೀಕ್ಷೆ ಇದೆ ಎಂದವರು ತಿಳಿಸಿದ್ದಾರೆ.

ವಂದೇ ಭಾರತ್ ಕುರ್ಚಿ ರೈಲುಗಳ ನಂತರ ಈಗ ವಂದೇ ಭಾರತ್ ಸ್ಲೀಪರ್ ರೈಲುಗಳ ನಿರ್ಮಾಣಕ್ಕೆ ಮುಂದಾಗಲಾಗಿದೆ. ಮಾದರಿ ಬೋಗಿ ಒಪ್ಪಿಗೆ ಪಡೆದ ನಂತರ ಸರಣಿ ಉತ್ಪಾದನೆಗೆ ಅನುಮತಿ ನೀಡಲಾಗುವುದು.

ವಂದೇ ಭಾರತ್ ಬೋಗಿಗಳಲ್ಲಿ ಹಲವಾರು ಹೊಸ ಸೌಲಭ್ಯಗಳನ್ನು ಸೇರ್ಪಡೆ ಮಾಡಲಾಗಿದೆ. ವಂದೇ ಭಾರತ ರೈಲಿನ ವಿನ್ಯಾಸವನ್ನು ನಾವು ನಿರಂತರವಾಗಿ ಸುಧಾರಿಸುತ್ತಿದ್ದೇವೆ ಎಂದು ಸಚಿವರು ಹೇಳಿದರು.

ವಂದೇ ಭಾರತ್ ಕುರ್ಚಿ ಬೋಗಿ, ವಂದೇ ಭಾರತ್ ಸ್ಲೀಪರ್, ವಂದೇ (2ನೇ ಪುಟಕ್ಕೆ)

## ಸರ್ಕಾರ ಕೆಡವುವ ಮಾತು ಮೂರ್ಖತನದ ಪರಮಾವಧಿ



ದಾವಣಗೆರೆ, ಸೆ. 1 – ಕಾಂಗ್ರೆಸ್‌ನವರು ತಮ್ಮ ಹುಳುಕುಗಳನ್ನು ಮುಚ್ಚಿಡಲು ಕೊವಿಡ್ ಹಗರಣ ಎಂಬ ಮಾತನಾಡುತ್ತಿದ್ದಾರೆ ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ್ ಟೀಕಿಸಿದ್ದಾರೆ.

ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸರ್ಕಾರ ಬದಲಾವಣೆ ಆಗಿ ಒಂದು ವರ್ಷ ನಾಲ್ಕು ತಿಂಗಳಾದ ಮೇಲೆ ಈಗ ಕೊವಿಡ್ ಹಗರಣದ ಬಗ್ಗೆ ಮಾತನಾಡುತ್ತಾರೆ. ಇಷ್ಟು ದಿನ ಏನು ಮಾಡುತ್ತಿದ್ದರು? ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಸುಮ್ಮನಿದ್ದರು. ಏಕೆ ಆಗ ಹಗರಣದಲ್ಲಿ ಪಾಲು ಇತ್ತಾ? ಎಂದು ಲೇವಡಿ ಮಾಡಿದರು.

ಕೊವಿಡ್ ಹಗರಣದ ವರದಿ ಕೈ ಸೇರಿದೆ ಎಂದು ಕಾಂಗ್ರೆಸ್‌ನರು ಹೇಳುತ್ತಿದ್ದಾರೆ. ಅವರು ತನಿಖೆ ಮಾಡಲಿ. ಕಾನೂನಿಗಿಂತ ಯಾರೂ ದೊಡ್ಡವರಲ್ಲ, ಎಲ್ಲರೂ ಕಾನೂನಿನ ಅಧೀನರು. ತಪ್ಪು ಮಾಡಿದವರಿಗೆ ಕಾನೂನಿನ ಮೂಲಕ ತನಿಖೆ ಮಾಡಿ ಕಾನೂನಿನ (4ನೇ ಪುಟಕ್ಕೆ)

## ಹರಪನಹಳ್ಳಿ ಪುರಸಭೆ ಅಧ್ಯಕ್ಷ ಚುನಾವಣೆಗೆ ಮತ್ತೆ ತಡೆಯಾಜ್ಞೆ



ಹರಪನಹಳ್ಳಿ, ಸೆ.1- ಸೆಪ್ಟೆಂಬರ್ 2ಕ್ಕೆ ನಿಗದಿಯಾಗಿದ್ದ ಇಲ್ಲಿನ ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಧಾರವಾಡ ಉಚ್ಚ ನ್ಯಾಯಾಲಯ ಮತ್ತೆ ತಡೆಯಾಜ್ಞೆ ನೀಡಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಜನಾಂಗದವರಿಗೆ ಅಧ್ಯಕ್ಷ ಸ್ಥಾನದ ಮೀಸಲಾತಿ ಬದಲಾಯಿಸುವಂತೆ ನ್ಯಾಯಾಲಯ ಮೊರೆಹೋದ ಕಾರಣ ಸೆ.2ಕ್ಕೆ ನಡೆಯಬೇಕಿದ್ದ ಚುನಾವಣೆ, 2ನೇ ಬಾರಿಗೆ ತಾತ್ಕಾಲಿಕ ಮುಂದೂಡಿಕೆಯಾಗಿದೆ. ಬರುವ ಸೆ.11ಕ್ಕೆ ವಿಚಾರಣೆ ದಿನಾಂಕ ನಿಗದಿ ಪಡಿಸಿದೆ.

ಈ ಮೊದಲು ಆ.21ರಂದು ಚುನಾವಣೆ ನಿಗದಿಯಾಗಿತ್ತು, ಪುರಸಭಾ ಸದಸ್ಯ ಟಿ. ವೆಂಕಟೇಶ್ ಎಂಬುವವರು ಮೀಸಲಾತಿ ವಿಚಾರವಾಗಿ ಧಾರವಾಡ ಉಚ್ಚ ನ್ಯಾಯಾಲಯ ಪೀಠದಿಂದ ತಡೆಯಾಜ್ಞೆ ಹೊರಡಿಸಿದ್ದರು. ಇದೀಗ ಬಿಜೆಪಿಯವರು ಮತ್ತೆ ನ್ಯಾಯಾಲಯದ ಮೊರೆ ಹೋದ ಕಾರಣ ಚುನಾವಣೆಗೆ 2ನೇ ಬಾರಿಗೆ (2ನೇ ಪುಟಕ್ಕೆ)

## ರಷ್ಯಾ ಮೇಲೆ ಅತಿ ದೊಡ್ಡ ಡ್ರೋನ್ ದಾಳಿ

ಮಾಸ್ಕೋ, ಸೆ. 1 - ಉಕ್ರೇನ್ ವಿರುದ್ಧದ ಸಮರ ಆರಂಭವಾದ ನಂತರ ರಷ್ಯಾದ ಮೇಲೆ ಅತಿ ದೊಡ್ಡ ಡ್ರೋನ್ ದಾಳಿ ನಡೆಸಲಾಗಿದ್ದು, 158 ಡ್ರೋನ್ ಗಳನ್ನು ತಡೆಯಲಾಗಿದೆ ಹಾಗೂ ನಾಶಗೊಳಿಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

ಈ ಪೈಕಿ 2 ಡ್ರೋನ್‌ಗಳನ್ನು ಮಾಸ್ಕೋ ನಗರದಲ್ಲಿ ಹಾಗೂ 9 ಡ್ರೋನ್‌ಗಳನ್ನು ಮಾಸ್ಕೋ ಹೊರ ವಲಯದಲ್ಲಿ ಹೊಡೆದುರುಳಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಉಕ್ರೇನ್ ಡ್ರೋನ್ ದಾಳಿಯ ಕಾರಣ ದಿಂದಾಗಿ ಸಮರವು ರಷ್ಯಾದ ಗಡಿ ಭಾಗ ದಿಂದ ಹೃದಯ ಭಾಗಕ್ಕೆ ತಲುಪಿದೆ. ರಷ್ಯಾ ಸಂಸ್ಕರಣಾ ಘಟಕಗಳು ಹಾಗೂ ತೈಲ ಘಟಕಗಳ ಮೇಲೆ ದಾಳಿ ನಡೆಸಲಾಗುತ್ತಿದೆ.



## ಸಂಸದರ ನೂತನ ಜನ ಸಂಪರ್ಕ ಕಚೇರಿ ಉದ್ಘಾಟನೆ

ದಾವಣಗೆರೆ, ಆ. 1 - ಲೋಕಸಭಾ ಕ್ಷೇತ್ರದ ಸಂಸತ್ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಭಾನುವಾರ ಜಿಲ್ಲಾಧಿಕಾರಿ ಕಚೇರಿಯ 31 ಮತ್ತು 32ನೇ ಕೊಠಡಿಯಲ್ಲಿ ತಮ್ಮ ನೂತನ ಜನ ಸಂಪರ್ಕ ಕಚೇರಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸುವ ಉದ್ದೇಶದಿಂದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನೂತನ ಜನ ಸಂಪರ್ಕ ಕಚೇರಿಯನ್ನು ಆರಂಭಿಸಲಾಗಿದ್ದು ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಕಚೇರಿಗೆ ತಲುಪಿಸುವಂತೆ ಹೇಳಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಸಾರ್ವಜನಿಕರು ಉಪಸ್ಥಿತರಿದ್ದರು.

## ರಾಜಕಾರಣಿಗಳ ಮರಣದಂಡನೆ ಭರವಸೆಗೆ ಸುಪ್ರೀಂ ಜಡ್ಜ್ ಆಕ್ಷೇಪ

ಪುಣೆ, ಸೆ. 1 - ದೋಷಿಗಳಿಗೆ ಮರಣದಂಡನೆ ವಿಧಿಸುವುದಾಗಿ ಭರವಸೆ ನೀಡುವ ಮೂಲಕ ಕೆಲ ಪ್ರಕರಣಗಳನ್ನು ರಾಜಕಾರಣಿಗಳು ಬಳಸಿಕೊಳ್ಳಲು ಮುಂದಾಗುತ್ತಿದ್ದಾರೆ. ಇದು ಗುಂಪು ಆಡಳಿತಕ್ಕೆ ದಾರಿ ಮಾಡಿಕೊಡುತ್ತಿದೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಭಯ್ ಓಕಾ ತಿಳಿಸಿದ್ದಾರೆ.

ಪುಣೆಯಲ್ಲಿ ಮಹಾರಾಷ್ಟ್ರ ಮತ್ತು ಗೋವಾ ವಕೀಲರ ಒಕ್ಕೂಟದಿಂದ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, ಮರಣ ದಂಡನೆ ಕುರಿತು ಆದೇಶ ಹೊರಡಿಸಲು ನ್ಯಾಯಾಂಗಕ್ಕೆ ಮಾತ್ರ ಅಧಿಕಾರ ಇದೆ ಎಂದು ಹೇಳಿದರು.

ರಾಜಕಾರಣಿಗಳು ಕೆಲ ಘಟನೆಗಳನ್ನು (5ನೇ ಪುಟಕ್ಕೆ)

## ಆಗಸ್ಟ್‌ನಲ್ಲಿ ಜಿಎಸ್‌ಟಿ ಸಂಗ್ರಹ 1.75 ಲಕ್ಷ ಕೋಟಿ ರೂ.

ನವದೆಹಲಿ, ಸೆ. 1 - ಆಗಸ್ಟ್ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹ ಶೇ. 10ರಷ್ಟು ಹೆಚ್ಚಾಗಿದ್ದು 1.75 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ದೇಶಿಯ ಬಳಕೆ ಹೆಚ್ಚಾಗಿರುವ ಕಾರಣ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದೆ.

ಕೇಂದ್ರ ಸರ್ಕಾರ ಭಾನುವಾರ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಆಗಸ್ಟ್ ತಿಂಗಳಲ್ಲಿ ದೇಶೀಯ ವಹಿವಾಟು ಮೂಲಕ ದೊರೆಯುವ ತೆರಿಗೆ ಶೇ. 9.2 ರಷ್ಟು (4ನೇ ಪುಟಕ್ಕೆ)


॥ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಕೃಪ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**

ದಾವಣಗೆರೆ ನಗರ ಎಸ್.ಎಸ್. ಲೇಔಟ್ ವಾಸಿ
ಶ್ರೀ ಕೆ. ತಿಪ್ಪಣ್ಣ ಬಾಡ, ನಿವೃತ್ತ ಅಧೀಕ್ಷಕರು, ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 30-08-2024ನೇ ಶುಕ್ರವಾರ ಮಧ್ಯಾಹ್ನ 12-05ಕ್ಕೆ ನನ್ನ ಮಗನಾದ



ಜನನ : 21-09-1969
ನಿಧನ : 30-08-2024

**ಪ್ರೊ॥ ಡಾ॥ ಕೆ.ಟಿ. ಚಂದ್ರಶೇಖರ್** ಎಂ.ಡಿ.ಎಸ್.
ಪೆರಿಯೋಡಾಂಟಿಸ್ಟ್ & ಇಂಪ್ಲಾಟೊಲಾಜಿಸ್ಟ್
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 03-09-2024ನೇ ಮಂಗಳವಾರ
ಬೆಳಿಗ್ಗೆ 11-00ಕ್ಕೆ ತರಳಬಾಳು ಮಿನಿ ಸಮುದಾಯ ಭವನ, ಹದಡಿ ರಸ್ತೆ, ದಾವಣಗೆರೆಯಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಕಿರಣ್ ಚಂದ್ರಶೇಖರ್ ಮಕ್ಕಳಾದ ಅಪೂರ್ವ, ಅನನ್ಯ,
ಶ್ರೀಮತಿ ರೇಖಾ, ಶ್ರೀ ಮಲ್ಲಿಕಾರ್ಜುನ ಮತ್ತು ಮಕ್ಕಳು, ದಾವಣಗೆರೆ
ಶ್ರೀಮತಿ ಮಿನಾಕ್ಷಿ ಡಾ॥ ಎನ್.ಬಿ. ದೊಡ್ಡಗೌಡರ ಮತ್ತು ಮಕ್ಕಳು, ರಾಣೇಬೆನ್ನೂರು
ಶ್ರೀಮತಿ ಕೆ.ಟಿ. ಗೀತಾ ಶ್ರೀ ರವಿ ಸಿ.ಬಿ. ಮತ್ತು ಮಕ್ಕಳು, ಬೆಂಗಳೂರು
ಕಬ್ಬೂರು ವಂಶಸ್ಥರು, ಬಾಡ ಹಾಗೂ ಬಂಧು-ಮಿತ್ರರು. ಮೊ. : 7566668687

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಶೀಘ್ರದಲ್ಲೇ ಹರಿಹರದಲ್ಲಿ ದೂಡಾ ಶಾಖಾ ಕಚೇರಿ ಆರಂಭ : ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ



ಹರಿಹರ, ಸೆ.1- ಇಲ್ಲಿನ ನಗರಸಭೆಯಲ್ಲಿ ಒಂದು ಕೊಠಡಿಯನ್ನು ನಿಗದಿ ಪಡಿಸಿದರೆ, ದಾವಣಗೆರೆ- ಹರಿಹರ ಪ್ರಾಧಿಕಾರದ ಶಾಖಾ ಕಚೇರಿಯನ್ನು ಒಂದು ತಿಂಗಳ ಒಳಗೆ ಆರಂಭಿಸಲಾಗುವುದು ಎಂದು ದೂಡಾ ಅಧ್ಯಕ್ಷ ದಿನೇಶ್ ಶೆಟ್ಟಿ ಹೇಳಿದರು.

ರಾಯಲ್ ರಾಕ್ ಇನ್ ಹೋಟೆಲ್ ಸಭಾಂಗಣದಲ್ಲಿ ಹರಿಹರ ನಗರದ ಕಾಂಗ್ರೆಸ್ ಮತ್ತು ಅಭಿಮಾನಿಗಳ ಬಳಗದ ವತಿಯಿಂದ ಇಂದು ನಡೆದ ಅಭಿನಂದನಾ ಸಮಾರಂಭದಲ್ಲಿ ಗೌರವ ಸ್ವೀಕರಿಸಿ ಅವರು ಮಾತನಾಡಿದರು.

ಪ್ರಾಧಿಕಾರದ ವ್ಯಾಪ್ತಿಗೆ ಹರಿಹರ ನಗರ ಸೇರುವುದರಿಂದ ಇಲ್ಲಿನ ಜನರ ಸಮಸ್ಯೆಗಳು ಏನೆಂಬುದನ್ನು ಸಂಪೂರ್ಣವಾಗಿ ಅರಿತುಕೊಂಡಿದ್ದು, ಇಲ್ಲಿನ ಜನರ ಅನುಕೂಲದ ದೃಷ್ಟಿಯಿಂದ ಪ್ರಾಧಿಕಾರದ ಶಾಖಾ ಕಚೇರಿಯನ್ನು ಆರಂಭಿಸಿ, ಅದಕ್ಕೆ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗುತ್ತದೆ ಎಂದರು.

ಸ್ಥಳೀಯ ಜನರ ಕುಡಿಯುವ ನೀರಿನ ಶೇಖರಣಾ ಘಟಕದ ಸ್ಥಾಪನೆ ವಿಚಾರಕ್ಕೆ ಸಂಬಂಧಿಸಿದಂತೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಬಳಿ ಚರ್ಚೆ ನಡೆಸಲಾಗುತ್ತದೆ. ಜೊತೆಗೆ ಇಲ್ಲಿನ ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಮಾರು 50 ಎಕರೆ ಜಮೀನನ್ನು ಖರೀದಿಸಿ ಸಿ.ಎ. ಸೈಟ್ ಮಾಡಿ, ಬಡವರಿಗೆ ಹಂಚಿಕೆ ಮಾಡುವಂತ ಆಲೋಚನೆ ಹೊಂದಿದ್ದು, ಮುಂದಿನ ದಿನಗಳಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಅವುಗಳನ್ನು ಹಂಚಿಕೆ ಮಾಡಲಾಗುತ್ತದೆ ಎಂದು ಹೇಳಿದರು

ಮಾಜಿ ಶಾಸಕ ಎಸ್. ರಾಮಪ್ಪ, ನಂದಿಗಾವಿ ಶ್ರೀನಿವಾಸ್, ಜಿಪಂ ಮಾಜಿ ಸದಸ್ಯ ಎಂ ನಾಗೇಂದ್ರಪ್ಪ ಮಾತನಾಡಿದರು.

ಕೆ.ಪಿ.ಸಿ.ಸಿ. ಸದಸ್ಯ ಬಿ. ರೇವಣಸಿದ್ದಪ್ಪ ಮಾತನಾಡಿ, ಜನರು ಮನೆ ಕಟ್ಟುವುದಕ್ಕೆ ಲೈಸೆನ್ಸ್ ಮತ್ತು ಇತರೆ ದಾಖಲೆಗಳನ್ನು ಪಡೆಯುವುದಕ್ಕೆ ಸಾಕಷ್ಟು ತೊಂದರೆಗಳಾಗುತ್ತಿವೆ. ಕಾರಣ, ನಗರದಲ್ಲಿ ದೂಡಾ ಶಾಖಾ ಕಚೇರಿಯನ್ನು ತೆರೆಬೇಕು ಎಂದು ಹೇಳಿದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ, ಸಚಿವ ಮಲ್ಲಿಕಾರ್ಜುನ ಅವರು ದಾವಣಗೆರೆಯಲ್ಲಿ ರಸ್ತೆ, ನೀರು ಸೇರಿದಂತೆ ಎಲ್ಲಾ ಅಭಿವೃದ್ಧಿ ಮಾಡಿದ್ದಾರೆ. ಹರಿಹರ ನಗರವನ್ನು ಆ ಮಟ್ಟದಲ್ಲಿ ಅಭಿವೃದ್ಧಿ ಮಾಡಬೇಕು. ವಿದ್ಯುತ್ ದ್ವೀಪಗಳನ್ನು ಶಿವಮೊಗ್ಗದ ಕಡೆ ಬೈಪಾಸ್ ರಸ್ತೆಯವರಿಗೆ, ಮತ್ತು ಹರಪನಹಳ್ಳಿ ರಸ್ತೆಯ ಗುತ್ತೂರಿನವರೆಗೆ ವಿಸ್ತರಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ದೂಡ ಸದಸ್ಯ ಜಬ್ಬಾರ್ ಸಾಬ್, ಅಯೂಬ್ ಪೈಲ್ವಾನ್, ಸಿ.ಎನ್. ಹುಲುಗೇಶ್, ನಗರಸಭೆ ಸದಸ್ಯರಾದ ಅಲೀಂ ಮುಜಾಮಿಲ್ ಬಿಲ್ಲು, ತಾಪಂ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ರೇವಣಸಿದ್ದಪ್ಪ ಅಮರಾವತಿ, ಅಂದನೂರು ಕೊಟ್ರೇಶ್, ಹನುಮಂತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ ಹನುಮಂತಪ್ಪ, ಎಂ. ಎಸ್. ಆನಂದ್, ಎ.ಬಿ. ಬಸವರಾಜ್, ಮಹಮ್ಮದ್ ಫೈರೋಜ್, ಡಾ ಅಜಿತ್ ಹೆಗಡೆ, ಹೋವಳೆ ರವೀಂದ್ರ, ಪ್ರಕಾಶ್ ಕೋಳೂರು, ಸನಾವುಲ್ಲಾ ಸಾಬ್, ಹೆಚ್. ಶಿವಪ್ಪ, ಶೇಖರ್ ಶೆಟ್ಟಿ, ಕೆ.ಜಿ. ರವೀಂದ್ರ, ಹೊಟೇಲ್ ಮಾಲೀಕರಾದ ಸುರೇಶ್ ರಾಜನವರ್, ವಷಿಷ್ಠ ರಾಜನವರ್ ಹಾಗೂ ಇತರರು ಹಾಜರಿದ್ದರು.

# ಇತಿಹಾಸ ರಾಜರ ಕಥೆಯಲ್ಲ, ಅದು ಬದುಕಿನ ಚರಿತ್ರೆ

## 'ಐತಿಹಾಸಿಕ ಪರಂಪರೆ ಉಳಿಸಿ' ಎಂಬ ಕಾರ್ಯಕ್ರಮದಲ್ಲಿ ವೀಣಾ ಮಹಾಂತೇಶ



**ಹರಪನಹಳ್ಳಿ**

ಹರಪನಹಳ್ಳಿ, ಸೆ.1- ಇತಿಹಾಸವೆಂದರೆ ಬರಿ ರಾಜರ ಕಥೆಯಲ್ಲ, ಅದು ಬದುಕಿನ ಚರಿತ್ರೆಯಾಗಿದೆ. ಈ ನಿಟ್ಟಿನಲ್ಲಿ ಪ್ರತಿ ಮನೆಯು ತನ್ನದೇ ಆದ ಇತಿಹಾಸ ಹೊಂದಿರುತ್ತದೆ ಎಂದು ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟಿನ ಅಧ್ಯಕ್ಷೆ ಎಂ.ಪಿ ವೀಣಾ ಮಹಾಂತೇಶ ಹೇಳಿದರು.

ಎಂ.ಪಿ ಪ್ರಕಾಶ್ ಸಮಾಜ ಮುಖಿ ಟ್ರಸ್ಟ್ ಹಾಗೂ ಇತಿಹಾಸ ಪರಂಪರೆ ಅಧ್ಯಯನ ಟ್ರಸ್ಟಿನ ಸಹಯೋಗದಲ್ಲಿ ಪಟ್ಟಣದ ಅಂಬ್ಲಿ ದೊಡ್ಡ ಭರಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಭಾನುವಾರ ಆಯೋಜಿಸಿದ್ದ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾಡಿನ ಅಮೂಲ್ಯ ಸಂಪತ್ತುಗಳಾದ ಶಾಸನಗಳು, ಕೋಟೆಗಳು, ದೇಗುಲಗಳು, ಸ್ಮಾರಕಗಳು ಮತ್ತು ನಾಣ್ಯಗಳು ನಮ್ಮ ಹಿಂದಿನ ಚರಿತ್ರೆ ತಿಳಿಸುವ ದಾಖಲೆಗಳಾಗಿವೆ ಎಂದರು. ಬಹು ಸಂಸ್ಕೃತಿಯನ್ನು ಬಿಂಬಿಸುವ ಇತಿಹಾಸದ ಆಧಾರಗಳು ನಾಶವಾದರೆ ನಮ್ಮ ಪರಂಪರೆಯೇ ಹಾಳಾದಂತೆ. ಆದ್ದರಿಂದ ನಮ್ಮ ಸುತ್ತಲಿರುವ ಐತಿಹಾಸಿಕ ಚರಿತ್ರೆಗಳ ಬಗ್ಗೆ ಅಲಕ್ಷಿಸಬಾರದು ಎಂದು ಹೇಳಿದರು.

ಕರ್ನಾಟಕ ಇತಿಹಾಸ ಅಕಾಡೆಮಿ ಅಧ್ಯಕ್ಷ ಡಾ. ದೇವರ ಕೊಂಡಾರೆಡ್ಡಿ ಮಾತನಾಡಿ, ಇತಿಹಾಸ ಮರೆತವರು ಇತಿಹಾಸ ನಿರ್ಮಿಸಲಾರರು. ನಮ್ಮ ಪರಂಪರೆಯ ಪ್ರತೀಕಗಳಾದ ಸ್ಮಾರಕಗಳು, ವೀರಗಲ್ಲು, ಶಾಸನಗಳು ಹಾಗೂ ಕೆರೆ-ಕಟ್ಟೆಗಳನ್ನು ರಕ್ಷಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ಐತಿಹಾಸಿಕ ಪ್ರಜ್ಞೆಯ ಬಗ್ಗೆ ಜಾಗೃತಿ ಯಾಗಬೇಕು. ಕಣ್ಣಿಗೆ ಕಾಣುವ ಶಿಲ್ಪ ಕಲೆ, ಶಾಸನಗಳು ಮತ್ತು ಸ್ಮಾರಕಗಳೆಡೆ ಗಮನಹರಿಸಿ, ಅವುಗಳಲ್ಲಡಗಿದ ಇತಿಹಾಸ ಜ್ಞಾನ ತಿಳಿಯಬೇಕು ಎಂದು ಹೇಳಿದರು.

ಎಡಿಬಿ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಮೋಹನ ರೆಡ್ಡಿ ಮಾತನಾಡಿ, ಅಳಿವಿನಂಚಿನಲ್ಲಿರುವ ಶಿಲಾ ಶಾಸನಗಳನ್ನು ಸಂಗ್ರಹಿಸುವ ಜತೆಗೆ ರಕ್ಷಣೆ ಮಾಡಬೇಕು ಎಂದರು. ಇತಿಹಾಸವು ವಿಜ್ಞಾನವಿದ್ದಂತೆ. ನಿಖರ ದತ್ತಾಂಶ ಮಾಹಿತಿಯ ಮೇಲೆ ಇತಿಹಾಸ ರಚನೆಯಾಗಿದೆಯೇ ವಿನಃ ಊಹಾ ಪೋಹಗಳಿಂದಲ್ಲ ಎಂದು ಹೇಳಿದರು.

ಈ ವೇಳೆ ಎಡಿಬಿ ಕಾಲೇಜಿನ ಪ್ರಾಚಾರ್ಯ ಸಿದ್ದಲಿಂಗ ಮೂರ್ತಿ, ಡಾ.ಡಿ. ತಿಪ್ಪೇಸ್ವಾಮಿ, ಡಾ. ಸಂಧ್ಯಾ, ಬಿ.ಕೆ. ಧನಪಾಲ್, ಬಸವರಾಜ್, ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ರೇಣುಕ ಪ್ರಸಾದ್ ಕಲ್ಮಠ, ಮತ್ತಿತರರಿದ್ದರು.

# ವಂದೇ ಭಾರತ್ ಸ್ಲೀಪರ್ ಮಾದರಿ ಅನಾವರಣ

**(1ನೇ ಪುಟದಿಂದ)** ಭಾರತ್ ಮೆಟ್ರೋ ಹಾಗೂ ಅಮೃತ್ ಭಾರತ್ ಎಂಬ ನಾಲ್ಕು ರೀತಿಯ ಬೋಗಿಗಳನ್ನು ರೂಪಿಸಲಾಗುತ್ತಿದೆ ಎಂದವರು ಹೇಳಿದರು.

ವಂದೇ ಭಾರತ್ ಸ್ಲೀಪರ್ ರೈಲು 16 ಬೋಗಿಗಳನ್ನು ಹೊಂದಿರಲಿದೆ. ಇದು 800 ರಿಂದ 1200 ಕಿಲೋ ಮೀಟರ್‌ವರೆಗೆ ಪ್ರಯಾಣ ಮಾಡಲಿದೆ. ಈ ರೈಲು ಮಧ್ಯಮ ವರ್ಗದವರನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ ಹಾಗೂ ಇದರ ದರಗಳು ರಾಜಧಾನಿ ಎಕ್ಸ್‌ಪ್ರೆಸ್ ರೈಲಿಗೆ ಅನುಗುಣವಾಗಿರಲಿವೆ ಎಂದು ವೈಷ್ಣವ್ ತಿಳಿಸಿದ್ದಾರೆ.

ವಂದೇ ಭಾರತ್ ರೈಲಿನಲ್ಲಿ ಪೂರೈಸಲಾಗುವ ಆಹಾರದ ಬಗ್ಗೆ ದೂರುಗಳಿರುವ ಪ್ರಶ್ನೆಗೆ ಉತ್ತರಿಸಿದ ಸಚಿವರು, ಭಾರತೀಯ ರೈಲ್ವೆಯು ಪ್ರತಿದಿನ 13 ಲಕ್ಷ ಜನರಿಗೆ ಭೋಜನ ಪೂರೈಸುತ್ತದೆ. ದೂರಿನ ಪ್ರಮಾಣ 0.01ಕ್ಕಿಂತ ಕಡಿಮೆ ಇದೆ. ಆದರೂ ನಾವು ದೂರುಗಳನ್ನು ಗಂಭೀರವಾಗಿ ಪರಿಶೀಲಿಸುತ್ತಿದ್ದೇವೆ ಹಾಗೂ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳಿದರು.

ಇದೇ ವೇಳೆ ಸಚಿವರು, ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್‌ನ (ಬಿಇಎಂಎಲ್) ವಂದೇ ಭಾರತ್ ಉತ್ಪಾದನಾ ಘಟಕಕ್ಕೆ ಶಿಲಾನ್ಯಾಸ ನೆರವೇರಿಸಿದರು.

# ಅಂಚೆ ಇಲಾಖೆಯ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಸೆ. 1 - ಅಂಚೆ ಇಲಾಖೆಯಿಂದ 6 ರಿಂದ 9 ನೇ ತರಗತಿ ವಿದ್ಯಾರ್ಥಿಗಳಿಗೆ ಅಂಚೆ ಚೀಟಿಗಳ ಸಂಗ್ರಹಕ್ಕೆ ಉತ್ತೇಜಿಸಲು 'ದೀನ್ ದಯಾಳ ಸ್ಪರ್ಶ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ಅಂಚೆ ಚೀಟಿಗಳ ಮೌಲ್ಯ ಮತ್ತು ಸಂಶೋಧನೆಯ ಕುರಿತಾದ ಹವ್ಯಾಸ ಬೆಳೆಸಲು ವಿದ್ಯಾರ್ಥಿವೇತನ ನೀಡಲಾಗುವುದು. ಚಿಕ್ಕ ವಯಸ್ಸಿನಲ್ಲಿ ಮಕ್ಕಳಲ್ಲಿ ಅಂಚೆ ಚೀಟಿಗಳ ಸಂಗ್ರಹ ಉತ್ತೇಜನದ ಮೂಲಕ ಸದಭಿರುಚಿಯ ಆರೋಗ್ಯ ಪೂರ್ಣ ಜ್ಞಾನಾಧಾರಿತ ಹವ್ಯಾಸ ಬೆಳೆಸುವುದು ಇದರ ಉದ್ದೇಶವಾಗಿದೆ. 2023-24 ನೇ ಶೈಕ್ಷಣಿಕ ವರ್ಷದಲ್ಲಿ ಶೇ 60ರಷ್ಟು ಅಂಕ ಪಡೆದಿರಬೇಕು ಮತ್ತು ಅಂಚೆ ಚೀಟಿಗಳ ಠೇವಣಿ ಖಾತೆಯನ್ನು ಅಥವಾ ಶಾಲೆಗಳ ಅಂಚೆ ಚೀಟಿ ಕ್ಲಬ್ ಸದಸ್ಯರಾಗಿರಬೇಕು.

ಅಂಚೆ ಚೀಟಿಗಳ ಸಂಗ್ರಹದ ರಸಪ್ರಶ್ನೆ ಮತ್ತು ಯೋಜನೆ ಕಾರ್ಯದ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದ್ದು, ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ 6 ಸಾವಿರ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ನಾಡಿದ್ದು ದಿನಾಂಕ 3 ಕೊನೆ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ www.indiapost.gov.in ಅಥವಾ www.karnatakapost.gov.in 8861126883 2019146755, 08192-236277 ಸಂಖ್ಯೆಗಳಿಗೆ ಸಂಪರ್ಕಿಸಬ ಹುದೆಂದು ಅಂಚೆ ಇಲಾಖೆ ಅಧೀಕ್ಷಕ ಚಂದ್ರಶೇಖರ ತಿಳಿಸಿದ್ದಾರೆ.

# ಹರಿಹರ ತಾಲ್ಲೂಕು ಕುರುಬ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಅಹ್ವಾನ

ಮಲೇಬೆನ್ನೂರು, ಸೆ.1- ಹರಿಹರ ತಾಲ್ಲೂಕು ಕುರುಬರ ಸಂಘದ ವತಿಯಿಂದ ಈ ತಿಂಗಳ ಕೊನೆಯಲ್ಲೇ ಶೈಕ್ಷಣಿಕ ಪುರಸ್ಕಾರ ಮತ್ತು ಸಮಾಜದ ಹಿರಿಯರಿಗೆ ಗೌರವ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಪೂಜಾರ ಹಾಲೇಶಪ್ಪ ತಿಳಿಸಿದ್ದಾರೆ.

ಆದ್ದರಿಂದ ಹರಿಹರ ತಾಲ್ಲೂಕಿನ ಗ್ರಾಮಾಂತರ ವಿದ್ಯಾರ್ಥಿಗಳು 2023-24 ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 75 ಕ್ಕಿಂತ ಅಧಿಕ ಅಂಕ ಮತ್ತು ಹರಿಹರ ನಗರದ ವಿದ್ಯಾರ್ಥಿಗಳು ಶೇ. 85 ಕ್ಕಿಂತ ಅಧಿಕ ಅಂಕ ಗಳಿಸಿರಬೇಕು. ಅಂತಹ ವಿದ್ಯಾರ್ಥಿಗಳು ತಮ್ಮ ವಿಳಾಸ ಹಾಗೂ ಮೊಬೈಲ್ ನಂಬರ್ ಮತ್ತು ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 20 ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಸಲ್ಲಿಸುವಂತೆ ಹಾಲೇಶಪ್ಪ ಮನವಿ ಮಾಡಿದ್ದಾರೆ.

ವಿವರಕ್ಕೆ ಸಂಪರ್ಕಿಸಿ : ತಿಪ್ಪಣ್ಣ ಕಬ್ಬಾರ್ (8151827429), ಡಿ.ಕೆ. ಕರಿಬಸಪ್ಪ (9901907658), ಕೃಷ್ಣಮೂರ್ತಿ (8147603987), ಡಾ. ಕರಿಬಸಯ್ಯ ಮಠದ (9880630199), ಎಸ್. ರಾಜಪ್ಪ (9901651239).




## ಸವಿನೆನಪು

ದಿ|| ಹರಿಯಪ್ಪರ ಮಂಜುನಾಥ್
ಕಕ್ಕರಗೊಳ್ಳ. (ಮರಣ : 2.09.2007)
ನೀವು ನಮ್ಮನ್ನಗಲಿ
ಹದಿನೇಳು ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿರುವ...
**ಹರಿಯಪ್ಪರ ರೇವಣಸಿದ್ದಪ್ಪ, ಮಕ್ಕಳು ಮತ್ತು ಮೊಮ್ಮಕ್ಕಳು, ಗೆಳೆಯರ ಬಳಗ, ಕಕ್ಕರಗೊಳ್ಳ.**

## ಸವಿನೆನಪು





**ಲಿಂ|| ಮೂರ್ಕಲ್ ಬಸವರಾಜಪ್ಪನವರು**
ನಿವೃತ್ತ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಕೆಇಬಿ.
**ಲಿಂಗೈಕ್ಯ : 02.11.1987**

**ಲಿಂ|| ಶ್ರೀಮತಿ ಮೂರ್ಕಲ್ ಸುಮಂಗಳಮ್ಮ ಬಸವರಾಜಪ್ಪನವರು (ಕರಬಸಮ್ಮ)**
**ಲಿಂಗೈಕ್ಯ : 02.09.2012**

ನೀವು ನಮ್ಮನ್ನಗಲಿ ವರ್ಷಗಳೇ ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿರುವ
ಮಕ್ಕಳಾದ : **ಶ್ರೀಮತಿ ಹೇಮಲತಾ ಲಿಂ|| ಎಂ.ಬಿ. ಕೊಟ್ರೇಶ್ವರ,** Rtd ASK, KSRTC, ಡಿಪ್ಪೋ, ದಾವಣಗೆರೆ.
**ಶ್ರೀಮತಿ ಮಂಗಳಗೌರಿ ಲಿಂ|| ಎಂ.ಬಿ. ಶಿವಪ್ರಕಾಶ್,** Rtd Asst. Manager, KSFCSC Ltd., Shivamogga.
**ಶ್ರೀಮತಿ, ಶ್ರೀ ಎಂ.ಬಿ. ವೀರಭದ್ರಸ್ವಾಮಿ,** ನಿವೃತ್ತ AEE, ಅಪ್ಪರ್ ಭದ್ರಾ ಉಪ ವಿಭಾಗ, ನಂ. 18, ಚಿತ್ರದುರ್ಗ.
**ಶ್ರೀಮತಿ, ಶ್ರೀ ಎಂ.ಬಿ. ಮಂಜುನಾಥ್,** AEE, ನಂ.3 ಹೇಮಾವತಿ ನಾಲಾ ತನಿಖಾ ಉಪವಿಭಾಗ ಹೆಬ್ಬೂರು.
**ಹಾಗೂ ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ದಾವಣಗೆರೆ. ಮೊ : 94483-94667**


# ನಂದಿ ಸೌಹಾರ್ದ ಸಹಕಾರಿ ಸಂಘಕ್ಕೆ 42 ಲಕ್ಷ ರೂ. ನಿವ್ವಳ ಲಾಭ



## ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಗೌಡ್ರ ಬಸವರಾಜಪ್ಪ ಸಂತಸ

ಮಲೇಬೆನ್ನೂರು, ಸೆ.1- ಇಲ್ಲಿನ ಪ್ರತಿಷ್ಠಿತ ಶ್ರೀ ನಂದಿ ಸೌಹಾರ್ದ ಸಹಕಾರಿ ಸಂಘದ 2023-24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಭಾನುವಾರ ಪಟ್ಟಣದ ನಿಟ್ಟೂರು ರಸ್ತೆಯಲ್ಲಿರುವ ವೀರಶೈವ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷರಾದ ಜಿಗಳಿಯ ಗೌಡ್ರ ಬಸವರಾಜಪ್ಪ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು.

ರಾಜರಾಜೇಶ್ವರಿ ಶಾಲೆಯ ರೇವತಿ ಸಂಗಡಿಗರಿಂದ ಪ್ರಾರ್ಥನೆ ನಡೆಯಿತು. ಸ್ವಾಗತ ಕೋರಿದ ಸಂಘದ ಮಾಜಿ ಅಧ್ಯಕ್ಷರೂ ಆದ ಹಾಲಿ ನಿರ್ದೇಶಕ ಜಿಗಳಿ ಇಂದೂಧರ್ ಅವರು, ಸಾಲ ವಿತರಣೆ ಮತ್ತು ಸಾಲ ವಸೂಲಾತಿಯಲ್ಲಿ ನಮ್ಮ ಸಂಘವು ಪ್ರಥಮ ಶ್ರೇಣಿಯಲ್ಲಿದೆ ಎಂದರು.

2023-24ನೇ ಸಾಲಿನ ವಾರ್ಷಿಕ ವರತಿ ಮಂಡಿಸಿದ ಸಂಘದ ಅಧ್ಯಕ್ಷ ಜಿಗಳಿಯ ಗೌಡ್ರ ಬಸವರಾಜಪ್ಪ ಅವರು, ನಮ್ಮ ಸಂಘವು 3326 ಸದಸ್ಯರನ್ನು ಮತ್ತು 1,13,95,300 ರೂ. ಷೇರು ಬಂಡವಾಳವನ್ನು ಹೊಂದಿದೆ. 14,15,22,676 ರೂ. ಒಟ್ಟು ಠೇವಣಿ ಸಂಗ್ರಹಿಸಿದ್ದು, ಸದಸ್ಯರಿಗೆ 14,08,82,844 ರೂ. ಸಾಲ ಸೌಲಭ್ಯ ಕಲ್ಪಿಸಲಾಗಿದೆ. 20,83,58,243 ರೂ. ದುಡಿಯುವ ಬಂಡವಾಳ ಹೊಂದಿರುವ ನಮ್ಮ ಸಂಘವು 42,01,516 ರೂ. ನಿವ್ವಳ ಲಾಭ ಹೊಂದಿದೆ ಎಂದರು.

ಸಂಘದ ಕಚೇರಿ ಹಿಂಭಾಗದಲ್ಲಿರುವ ಖಾಲಿ ನಿವೇಶನದಲ್ಲಿ ಸಿಬ್ಬಂದಿಗಳಿಗೆ ವಸತಿ ಗೃಹ ಕಟ್ಟಿಸಲು ಈ ವರ್ಷದ ಡಿವಿಡೆಂಡ್ ಹಣವನ್ನು ನೀಡುವಂತೆ ಆಡಳಿತ ಮಂಡಳಿ ಮಾಡಿದ ಮನವಿಗೆ ಮಹಾಸಭೆ ಒಪ್ಪಿಗೆ ನೀಡಿತು.

ಸಂಘದ ಮಾಜಿ ಅಧ್ಯಕ್ಷ ಬಿ.ವೀರಯ್ಯ ಮಾತನಾಡಿ, ಸಂಘದ ಇಂಟ್ರನಲ್ ಆಡಿಟ್ ಮಾಡಿಸುವಂತೆ ಹೇಳಿದಾಗ ಸಂಘದ ನಿರ್ದೇಶಕ ಇಂದೂಧರ್ ಅವರು, ಇಂಟ್ರನಲ್ ಆಡಿಟ್ ಅವಶ್ಯಕತೆ ಇಲ್ಲ ಎಂದರು. ಆಗ ಸಂಘದ ಮಾಜಿ ಅಧ್ಯಕ್ಷರೂ ಆದ ಹಾಲಿ ನಿರ್ದೇಶಕ ಹಳ್ಳಿಹಾಳ್ ಹೆಚ್. ಟಿ.ಶಾಂತನಗೌಡರು, ಸಂಘದ ಹಿತದೃಷ್ಠಿಯಿಂದ ಇಂಟ್ರನಲ್ ಆಡಿಟ್ ಮಾಡಿಸೋಣ ಎಂದರು.

ಬಸಾಪುರದ ಲೋಕಯ್ಯ ಮಾತನಾಡಿ, ಯಾರೇ ಸದಸ್ಯರು ಪ್ರಶ್ನೆ ಕೇಳಲು 7 ದಿನ ಮುಂಚಿತವಾಗಿಯೇ ಲಿಖಿತವಾಗಿ ಅರ್ಜಿ ಕೊಡಬೇಕೆಂಬ ನಿಯಮ ಇದ್ದರೂ ಈ ರೀತಿ ದಿಢೀರ್ ಪ್ರಶ್ನೆ ಕೇಳುವುದು ಸರಿಯಲ್ಲ ಎಂದಾಗ ಬಿ.ವೀರಯ್ಯ ವಾಗ್ವಾದಕ್ಕೆ ಇಳಿದರು. ಆಗ ಆಡಳಿತ ಮಂಡಳಿಯವರು ಮಧ್ಯ ಪ್ರವೇಶಿಸಿ, ಇಬ್ಬರನ್ನೂ ಸಮಾಧಾನ ಪಡಿಸಿದರು.

ಅಕೌಂಟೆಂಟ್ ಎಂ.ಬಿ.ನಾಗನಗೌಡ ಅವರು, ವಾರ್ಷಿಕ ಸಭೆಯ ಸೂಚನಾ ಪತ್ರ ಓದಿದರು. ಇನ್ನೋರ್ವ ಅಕೌಂಟೆಂಟ್ ಶ್ರೀಮತಿ ಸುಮಾ ಅವರು, ಕಳೆದ ವರ್ಷದ ವಾರ್ಷಿಕ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿದರು.

ಪ್ರಭಾರ ಕಾರ್ಯದರ್ಶಿ ಹೆಚ್. ರುದ್ರಗೌಡ ಅವರು, ಲೆಕ್ಕ ಪರಿಶೋಧಕರು ಪರಿಶೋಧಿಸಲ್ಪಟ್ಟ ಆರ್ಥಿಕ ತಃಖ್ತೆ ಹಾಗೂ ಅನುಪಾಲನಾ ವರದಿಯನ್ನು ಓದಿ ಸಭೆಯಿಂದ ಅಂಗೀಕರಿಸಿದರು.

ನಿರ್ದೇಶಕ ಹೆಚ್.ಟಿ.ಶಾಂತನಗೌಡ್ರು, ಲಾಭಾಂಶ ಹಂಚಿಕೆ ವಿಚಾರವನ್ನು ಮಂಡಿಸಿದರು. ನಿರ್ದೇಶಕ ಸಂತೋಷ್ ಪಾಳ್ಯದ್ ಅವರು, 2024-25ನೇ ಸಾಲಿನ ಮುಂಗಡ ಪತ್ರ ಓದಿದರು. ನಿರ್ದೇಶಕರಾದ ಶ್ರೀಮತಿ ಶೋಭಾ ಬಿ.ಜಿ.ಪಾಲಾಕ್ಷಪ್ಪ ಅವರು, ಲೆಕ್ಕ ಪರಿಶೋಧಕರ ನೇಮಕ ವಿಷಯ ಪ್ರಸ್ತಾಪಿಸಿದರು. ನಿರ್ದೇಶಕ ಕೊಕ್ಕನೂರಿನ ಬಿ.ಹೆಚ್. ರವಿ ಅವರು, ಮುಂದಿನ ವರ್ಷದ ಕಾರ್ಯ ಚಟುವಟಿಕೆಗಳನ್ನು ಸಭೆಗೆ ತಿಳಿಸಿದರು.

ಸಂಘದ ಉಪಾಧ್ಯಕ್ಷ ಕೊಕ್ಕನೂರಿನ ಕೆ.ಹೆಚ್.ಆಂಜನೇಯ ಪಾಟೀಲ್, ನಿರ್ದೇಶಕರಾದ ಹಳ್ಳಿಹಾಳ್ ಹೆಚ್.ಟಿ. ಪರಮೇಶ್ವರಪ್ಪ, ಎ.ಕೆ.ತಿಪ್ಪೇಶಪ್ಪ, ಹಿಂಡಸಘಟ್ಟಿಯ ಶ್ರೀಮತಿ ಸೌಭಾಗ್ಯ ಎಂ.ಬಿ. ಉದಯಕುಮಾರ್, ಮಲೇಬೆನ್ನೂರಿನ ಎ.ಆರೀಫ್ ಅಲಿ, ಕೊಕ್ಕನೂರಿನ ಆರ್. ನಾಗರಾಜ್, ಸಂಘದ ಕಾನೂನು ಸಲಹೆಗಾರ ನಂದಿತಾವರೆ ತಿಮ್ಮನಗೌಡ, ಇಂಜಿನಿಯರ್ ಜಿ.ಜಗನ್ನಾಥ್ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

ಸುಭಾಶ್‌ಚಂದ್ರ ವಂದಿಸಿದರು.

# ಇಂಡಿಗೋ ವಿಮಾನಕ್ಕೆ ಬಾಂಬ್ ಬೆದರಿಕೆ

ನಾಗಪುರ, ಸೆ. 1 - ಮಧ್ಯಪ್ರದೇಶದ ಜಬಲ್ಪುರದಿಂದ ತೆಲಂಗಾಣದ ಹೈದರಾಬಾದ್‌ಗೆ ತೆರಳುತ್ತಿದ್ದ ಇಂಡಿಗೋ ವಿಮಾನಕ್ಕೆ ಬಾಂಬ್ ಬೆದರಿಕೆ ಹಾಕಲಾಗಿತ್ತು. ನಂತರ ವಿಮಾನದ ಮಾರ್ಗ ಬದಲಿಸಿ ಅದನ್ನು ನಾಗಪುರದಲ್ಲಿ ಇಳಿಸಲಾಗಿತ್ತು. ನಾಗಪುರಕ್ಕೆ ತಲುಪಿದ ವಿಮಾನ ದಲ್ಲಿದ್ದ ಎಲ್ಲಾ ಪ್ರಯಾಣಿಕರನ್ನು ಇಳಿಸಲಾಯಿತು. ನಂತರ ವಿಮಾನವನ್ನು ವ್ಯಾಪಕ ಪರಿಶೀಲನೆಗೆ ಒಳಪಡಿಸಲಾಯಿತು. ಆದರೆ, ಶಂಕಾ ಸ್ಪದವಾದ ಏನೂ ದೊರೆಯಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

# ಭಾನುವಳ್ಳಿ ಪಿಎಸಿಎಸ್ ಅಧ್ಯಕ್ಷರಾಗಿ ನೆಳ್ಳೈಪ್ಪ

ಮಲೇಬೆನ್ನೂರು, ಸೆ.1- ಭಾನುವಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಗಂಗೆ ನೆಳ್ಳೈಪ್ಪ ಅವರು ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಕಮಲಮ್ಮ, ನಿರ್ದೇಶಕರಾದ ಹೆಚ್.ಎಂ. ಯಲ್ಲಪ್ಪ ರೆಡ್ಡಿ, ಟಿ. ರಂಗಪ್ಪ, ಬಿ. ಎಸ್. ಸದಾಶಿವಪ್ಪ, ಎ. ಮಹಬೂಬ್ ಸಾಬ್, ಬಿ. ಶಾಂತಪ್ಪ, ಹೆಚ್.ಕೆ. ಚಂದ್ರಪ್ಪ, ಬಸವರಾಜಪ್ಪ, ಶ್ರೀಮತಿ ಯಲ್ಲಮ್ಮ, ಸಂಘದ ಸಿಇಓ ಎಂ. ಆರ್. ಈರಪ್ಪ ಈ ವೇಳೆ ಹಾಜರಿದ್ದರು. ಸಹಕಾರ ಅಭಿವೃದ್ಧಿ ಅಧಿಕಾರಿ ಸುನೀತಾ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

# ಟ್ರಸ್ಟ್ ಡೀಡ್ ರದ್ದುಗೊಳಿಸಿ

**(1ನೇ ಪುಟದಿಂದ)** ಹಿರಿಯ ಜಗದ್ಗುರುಗಳು ರೂಪಿಸಿದ್ದ ಬೈಲಾ ಪ್ರಕಾರ ಸಾಧು ಸದ್ಧರ್ಮ ಸಮಾಜದ ಅಧ್ಯಕ್ಷರು ಹಾಗೂ ಭಕ್ತರು ಸೇರಿ ಕೊಂಡು ಉತ್ತರಾಧಿಕಾರಿ ಆಯ್ಕೆ ಮಾಡಬೇಕು ಎಂದು ಪಾಟೀಲ್ ಒತ್ತಾಯಿಸಿದರು.

ಮಾಜಿ ಶಾಸಕ ವಡ್ನಾಳ್ ರಾಜಣ್ಣ ಮಾತನಾಡಿ, ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಪೀಠ ತ್ಯಾಗ ಮಾಡಬೇಕು ಎಂದು ನಾವು ಹೇಳುವು ದಿಲ್ಲ. ಉತ್ತರಾಧಿಕಾರಿ ಆಯ್ಕೆ ಮಾಡಬೇಕು ಹಾಗೂ ಟ್ರಸ್ಟ್ ಡೀಡ್ ರದ್ದುಗೊಳಿಸಬೇಕು ಎಂಬುದಷ್ಟೇ ತಮ್ಮ ಒತ್ತಾಯ ಎಂದರು.

ಉದ್ಯಮಿ ಅಣಬೇರು ರಾಜಣ್ಣ ಮಾತನಾಡಿ, ಮುಂದಿನ ಪೀಠಾಧಿಪತಿ ಆಯ್ಕೆಯಾಗಬೇಕು, ಟ್ರಸ್ಟ್ ಡೀಡ್ ರದ್ದಾಗಬೇಕು, ಮಠದ ಭಕ್ತರ ಮೇಲೆ ಹಾಕಿರುವ ಪ್ರಕರಣಗಳನ್ನು ವಾಪಸ್ ಪಡೆಯಬೇಕು ಹಾಗೂ ಹಾಳಾಗಿರುವ ಶಾಲಾ - ಕಾಲೇಜುಗಳನ್ನು ಸರಿಪಡಿಸಬೇಕು ಎಂಬುದೇ ಭಕ್ತರ ಒತ್ತಾಯವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್, ಮುಖಂಡರಾದ ಆನಗೋಡು ನಂಜುಂಡಪ್ಪ, ಶಿವಮೊಗ್ಗ ಓಂಕಾರಪ್ಪ, ಡಿ.ಸಿ. ರಾಜಪ್ಪ, ಶಿವಮೊಗ್ಗ ಬೆನಕಪ್ಪ, ಕೆ.ಸಿದ್ದಪ್ಪ, ಜಿ.ಬಿ. ವೆಂಕಟೇಶ್ ಜಕ್ಕಲಿ, ಕಾಂತೇಶ್, ಬಸವನಗೌಡ್ರು, ಲಿಂಗರಾಜು ಆವರಗೆರೆ, ಶ್ರೀನಿವಾಸ ಮೆಳ್ಳೇಕಟ್ಟೆ, ಚೇತನ್ ಎಲೆಬೇತೂರು, ನಾಗರಾಜ್ ಪಲ್ಲಾಗಟ್ಟೆ, ಬಸವಲಿಂಗಪ್ಪ ಕಲಪನಹಳ್ಳಿ, ಸಂತೋಷ್ ಮೆಳ್ಳೇಕಟ್ಟೆ, ಟಿ. ಎಂ. ಶಿವಮೂರ್ತಯ್ಯ ಹಿರೇಮೇಗಳಗೆರೆ, ವಿಶ್ವನಾಥ್ ಮಂಡಲೂರು ಮತ್ತಿತರರು ಉಪಸ್ಥಿತರಿದ್ದರು.

# ಹರಿಹರ : ಬೀಡಿ, ಗಣಿ ಕಾರ್ಮಿಕರ ಮಕ್ಕಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಹರಿಹರ, ಸೆ. 1 - ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆ ವತಿಯಿಂದ ಬೀಡಿ ಹಾಗೂ ಗಣಿ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸಕ್ತ ಸಾಲಿನ ವಿದ್ಯಾರ್ಥಿ ವೇತನಕ್ಕಾಗಿ ಒಂದನೇ ತರಗತಿಯಿಂದ ಪದವಿ ಮಟ್ಟದ ವರೆಗೂ ಅಭ್ಯಾಸ ಮಾಡುತ್ತಿರುವ ಬೀಡಿ ಹಾಗೂ ಗಣಿ ಕಾರ್ಮಿಕರ ಮಕ್ಕಳು ಆನ್‌ಲೈನ್ ವೆಬ್‌ಸೈಟ್ ವಿಳಾಸ - scholarship.gov.in ಮೂಲಕ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬಹುದು.

ಒಂದನೇ ತರಗತಿಯಿಂದ ಹತ್ತನೇ ತರಗತಿ ವಿದ್ಯಾರ್ಥಿಗಳು ಮತ್ತು ಪಿ.ಯು.ಸಿ., ಐ.ಟಿ.ಐ., ಡಿಪ್ಲೋಮಾ ಹಾಗೂ ವೃತ್ತಿಪರ ಪದವಿ ಕೋರ್ಸ್ ಅಭ್ಯಾಸ ಮಾಡುತ್ತಿರುವವರು ಅಕ್ಟೋಬರ್ 31 ರೊಳಗಾಗಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಹರಿಹರದ ಬೀಡಿ ಕಾರ್ಮಿಕರ ಆಸ್ಪತ್ರೆ ವೈದ್ಯಾಧಿಕಾರಿ ತಿಳಿಸಿದ್ದಾರೆ.

# ಹರಪನಹಳ್ಳಿ ಪುರಸಭೆ ಅಧ್ಯಕ್ಷ ಚುನಾವಣೆಗೆ ಮತ್ತೆ ತಡೆಯಾಜ್ಞೆ

**(1ನೇ ಪುಟದಿಂದ)** ತಡೆಯಾಜ್ಞೆಯ ತೊಡಕು ಸುತ್ತಿಕೊಂಡಿದೆ. ಕಾಂಗ್ರೆಸ್ ಪಕ್ಷಕ್ಕೆ ಸರಳ ಬಹುಮತವಿದ್ದರೂ ಪುರಸಭೆ ಗದ್ದುಗೆ ಏರಲು ಅದೃಷ್ಟ ಕೂಡಿ ಬಂದಿಲ್ಲ ಎಂಬ ಮಾತುಗಳು ಜನಸಾಮಾನ್ಯರ ಬಾಯಿಂದ ಬರುತ್ತಿವೆ.

## ತುರ್ಚಘಟ್ಟದ ಹಿರಿಯಮ್ಮ ನಿಧನ



ದಾವಣಗೆರೆ ತಾಲ್ಲೂಕು ತುರ್ಚಘಟ್ಟದ ವಾಸಿ ದಿ|| ಭೀಮಪ್ಪ ಇವರ ಧರ್ಮಪತ್ನಿ ಶ್ರೀಮತಿ ಹಿರಿಯಮ್ಮ (72) ಅವರು ದಿನಾಂಕ 01-09-2024ರ ಭಾನುವಾರ ಬೆಳಿಗ್ಗೆ 4 ಕ್ಕೆ ನಿಧನರಾದರು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 01-09-2024ರ ಭಾನುವಾರ ಸಂಜೆ 3 ಗಂಟೆಗೆ ತುರ್ಚಘಟ್ಟದಲ್ಲಿ ನೆರವೇರಿಸಲಾಯಿತು.

# ಕೇರಳ : ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ವಿರುದ್ಧ ಆಡಳಿತಾರೂಢ ಶಾಸಕನ ಗಂಭೀರ ಆರೋಪ

## ಕಳ್ಳ ಸಾಗಣೆ, ದೂರವಾಣಿ ಕದ್ದಾಲಿಕೆ ಆರೋಪದಿಂದ ಸರ್ಕಾರಕ್ಕೆ ಮುಜುಗರ

ಕೊಚ್ಚಿ, ಸೆ. 1 - ಕೇರಳದ ಆಡಳಿತರೂಢ ಎಲ್‌ಡಿಎಫ್ ಶಾಸಕ ಪಿ.ವಿ. ಅನ್ವರ್ ಅವರು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ರಾಜಕೀಯ ಕಾರ್ಯದರ್ಶಿ ಪಿ.ಶಶಿ ಹಾಗೂ ಹಿರಿಯ ಐಪಿಎಸ್ ಅಧಿಕಾರಿ ಎಂ.ಆರ್. ಅಜಿತ್ ಕುಮಾರ್ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಇದು ಸರ್ಕಾರವನ್ನು ಪೇಚಿಗೆ ಸಿಲುಕಿಸಿದೆ. ಉದ್ಯಮಿಯೂ ಆಗಿರುವ ಅನ್ವರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದು, ಮುಖ್ಯಮಂತ್ರಿಗಳು ಇರಿಸಿರುವ ನಂಬಿಕೆಗೆ ಶಶಿ ಹಾಗೂ ಅಜಿತ್ ಕುಮಾರ್ ದ್ರೋಹ ಎಸಗಿದ್ದಾರೆ ಎಂದು ಆರೋಪಿಸಿದ್ದಾರೆ.

ಅಜಿತ್ ಕುಮಾರ್ ಸೇರಿದಂತೆ ಹಲವು ಉನ್ನತ ಅಧಿಕಾರಿಗಳು ದೇಶವಿರೋಧಿ ಹಾಗೂ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಅಜಿತ್ ಕುಮಾರ್ ಅವರು ಸಚಿವರು, ರಾಜಕೀಯ ನಾಯಕರು ಹಾಗೂ ರಾಜಕಾರಣಿಗಳ ದೂರವಾಣಿ ಕದ್ದಾಲಿಕೆ ಮಾಡುತ್ತಿದ್ದಾರೆ ಎಂದು ಹೇಳಿದರು.

ಈ ಅಧಿಕಾರಿ ಬಂಗಾರ ಕಳ್ಳ ಸಾಗಣೆ ದಂಧೆಕೋರರ ಜೊತೆ ನಿಕಟ ಸಂಪರ್ಕ ಹೊಂದಿದ್ದಾರೆ ಹಾಗೂ ಹಲವು ಗಂಭೀರ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆ. ಅಜಿತ್ ಕುಮಾರ್ ರೀತಿಯ ಅಧಿಕಾರಿಗಳು ತಮ್ಮ ಅಕ್ರಮ ಹಾಗೂ ಅಪರಾಧಿಕ ಚಟುವಟಿಕೆಗಳ ಕಾರಣದಿಂದಾಗಿ ಜೈಲು ಸೇರಲಿದ್ದಾರೆ ಎಂದು ಅನ್ವರ್ ಹೇಳಿದರು.

ಇಂತಹ ಅಧಿಕಾರಿಗಳ ಕೃತ್ಯದಿಂದಾಗಿ ಮುಖ್ಯಮಂತ್ರಿ ವಿಜಯನ್ ಹಾಗೂ ಅವರ ಸರ್ಕಾರ ಆರೋಪ ಎದುರಿಸಬೇಕಾಗುತ್ತದೆ ಎಂದು ಅನ್ವರ್ ಕಳವಳ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ತಮ್ಮ ಬಳಿ 29 ಖಾತೆಗಳನ್ನು ಹೊಂದಿದ್ದಾರೆ. ಕೆಲ ಖಾತೆಗಳ ಹೊಣೆಗಳನ್ನು ಅಧಿಕಾರಿಗಳಿಗೆ ವಹಿಸಿದ್ದಾರೆ. ಹಲವಾರು ಅಕ್ರಮಗಳು ನಡೆಯುತ್ತಿದ್ದರೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಶಶಿ ಅವರು ಈ ಬಗ್ಗೆ ಸರಿಯಾಗಿ ವಿಶ್ಲೇಷಿಸಲು ಹಾಗೂ ಮುಖ್ಯಮಂತ್ರಿಗೆ ತಿಳಿಸಲು ವಿಫಲವಾಗಿದ್ದಾರೆ ಎಂದು ಅನ್ವರ್ ಹೇಳಿದರು.

# ಕಲಾವಿದರು ನಾಡಿನ ಸಾಂಸ್ಕೃತಿಕ ಸಂಪತ್ತು



**ಬಿಳಿಚೋಡಿನ ಕಾರ್ಯಕ್ರಮದಲ್ಲಿ ರಂಗಕರ್ಮಿ ಎನ್.ಎಸ್. ರಾಜು**

ದಾವಣಗೆರೆ, ಸೆ. 1- ಕಲೆ, ಸಾಹಿತ್ಯ, ಸಂಸ್ಕೃತಿಗಳು ನಮ್ಮ ಬದುಕನ್ನು ಹಸನು ಗೊಳಿಸುವುದರ ಮೂಲಕ ಆದರ್ಶಪ್ರಾಯರನ್ನಾಗಿ ಮಾಡುತ್ತವೆ. ಕಲಾವಿದರು ಈ ನಾಡಿನ ಸಾಂಸ್ಕೃತಿಕ ಸಂಪತ್ತು, ಆದರೆ ಅವರ ಜೀವನ ನೋವಿನಿಂದ ಕೂಡಿರುತ್ತದೆ.

ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಾ ಕಲಾ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ ಎಂದು ರಂಗಕರ್ಮಿ ಎನ್.ಎಸ್. ರಾಜು ಅವರು ಕಳವಳ ವ್ಯಕ್ತಪಡಿಸಿದರು.

ಶ್ರೀ ಬಸವೇಶ್ವರ ಭಜನಾ ಸಂಘ ಬಿಳಿಚೋಡು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಬಿಳಿಚೋಡಿನ ಶ್ರೀ ಮಾರಿಕಾಂಬ ದೇವಸ್ಥಾನದ ಆವರಣದಲ್ಲಿ ಮೊನ್ನೆ ನಡೆದ ಬಸವ ಕೇಂದ್ರದ ಮಾಸಿಕ ಕಾರ್ಯಕ್ರಮದ ಅಂಗವಾಗಿ 'ಶ್ರಾವಣ ಸಂಜೆ ಜಾನಪದ ಸಂಗೀತ' ಕಾರ್ಯಕ್ರಮದ ಉದ್ಘಾಟನೆಯನ್ನು, ಹಾರ್ಮೋನಿಯಂ ನುಡಿಸುವುದರ ಮೂಲಕ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಕಲಾವಿದರು ವೇದಿಕೆ ಮೇಲೆ ರಾಜ, ಮಂತ್ರಿ, ಸೇವಕ, ದೇವಾನುದೇವತೆಗಳ ಪಾತ್ರ ಮಾಡುತ್ತಾ ಜನರನ್ನು ರಂಜಿಸುತ್ತಾರೆ, ಆದರೆ ಅವರ ವೈಯಕ್ತಿಕ ಬದುಕು ಆರ್ಥಿಕ ಸಂಕಷ್ಟಕ್ಕೊಳಗಾಗಿರುತ್ತದೆ, ಕಲಾವಿದರಿಗೆ ರಾಜ್ಯ ಸರ್ಕಾರ ನೀಡುವ ಎರಡು ಸಾವಿರ ರೂ. ಮಾಸಾಶನ ಅತ್ಯಲ್ಪವಾಗಿದ್ದು, ಅದನ್ನು ಕನಿಷ್ಠ 5000 ಕ್ಕೆ ಏರಿಸಲು ನಿರ್ಧಾರ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದರು.

ಜಗಳೂರಿನ ಶರಣ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಬಿ.ಎಂ. ವಿಶ್ವೇಶ್ವರಯ್ಯ ಅವರು ಮಾತನಾಡಿ, ಪ್ರತಿ ತಿಂಗಳು ಈ ಗ್ರಾಮದಲ್ಲಿ ಬಸವ ಚಿಂತನೆ ಮಾಡಿಕೊಂಡು ಬರುತ್ತಿರುವುದು ಸಂತೋಷದ ಸಂಗತಿ. ಇದೇ ರೀತಿ ಗ್ರಾಮೀಣ ಭಾಗದಲ್ಲೂ ನಡೆಸಿದರೆ ಜನರ ಬದುಕಿನ ಸುಧಾರಣೆಗೆ ಸಹಕಾರಿಯಾಗಲಿದೆ ಎಂದು ತಿಳಿಸುತ್ತಾ ಬಸವಾದಿ ಶರಣರ ವಿಚಾರಧಾರೆಗಳನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ಕುರುಬ ಸಮಾಜದ ಗುರುಗಳಾದ ಸಿದ್ದಯ್ಯ ಒಡೆಯರ್ ವಹಿಸಿದ್ದರು. ವೇದಿಕೆಯಲ್ಲಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ನೀಲನಾಯ್ಕ, ಸಮಾಜ ಸೇವಕರಾದ ಸುಧೀರ್ ಕುಮಾರ್, ಮಾರ್ತಾಂಡಪ್ಪ, ಶಿವಾಜಿರಾವ್, ಕರೇಗೌಡ್ರು ಮಂಜುನಾಥ್ ಇದ್ದರು.

ಪಿ. ನಾಗೇಂದ್ರಪ್ಪ ಕಾರ್ಯಕ್ರಮ ನಿರೂಪಿಸಿದರು. ಪಿ.ಜಿ. ಪರಮೇಶ್ವರಪ್ಪ ಸ್ವಾಗತಿಸಿದರು. ಶ್ರೀ ಬಸವೇಶ್ವರ ಭಜನಾ ಸಂಘದ ಕಲಾವಿದರು 'ಜಾನಪದ ಸಂಗೀತ' ನಡೆಸಿಕೊಟ್ಟರು.

# ಸರ್ಕಾರಿ ಶಾಲೆ ಸಬಲೀಕರಣ ಮೊದಲ ಆದ್ಯತೆಯಾಗಲಿ

## ಕರ್ನಾಟಕ ರಕ್ಷಣಾ ವೇದಿಕೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ರಾಯಭಾಗದ ವೀರಣ್ಣ ಮಡಿವಾಳರ



ದಾವಣಗೆರೆ, ಸೆ. 1- ಕರ್ನಾಟಕದಲ್ಲಿರುವ ಸರ್ಕಾರಿ ಶಾಲೆಗಳ ಸಬಲೀಕರಣ ಮೊದಲ ಆದ್ಯತೆಯಾಗಬೇಕಾಗಿದೆ. ಒಂದು ಬಾರಿಗಾದರೂ 'ಶೈಕ್ಷಣಿಕ ಬಜೆಟ್' ಮಂಡನೆ ಮಾಡುವ ಅವಶ್ಯವಿದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪ್ರಶಸ್ತಿ ಪುರಸ್ಕೃತರೂ, ಆದರ್ಶ ಶಿಕ್ಷಕರಾದ ರಾಯಭಾಗದ ವೀರಣ್ಣ ಮಡಿವಾಳರ ಹೇಳಿದರು.

ನಗರದ ಗುರುಭವನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಬಣ) ಜಿಲ್ಲಾ ಘಟಕದ ವತಿಯಿಂದ ಇಂದು ಹಮ್ಮಿಕೊಂಡಿದ್ದ 2023-24 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಕನ್ನಡ ಐಚ್ಛಿಕ ವಿಷಯದಲ್ಲಿ 125 ಕ್ಕೆ 125 ಅಂಕ ಪಡೆದ ವಿದ್ಯಾರ್ಥಿಗಳಿಗೆ 'ಜ್ಞಾನಕಾಶಿ' ಜಿಲ್ಲಾಮಟ್ಟದ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭದಲ್ಲಿ ಶಿಕ್ಷಣ ಕ್ರಾಂತಿಯ ಹರಿಕಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಪ್ರತ್ಯೇಕ ಶೈಕ್ಷಣಿಕ ಬಜೆಟ್ ಮಂಡನೆ ಮಾಡಬೇಕಾದ ಅಗತ್ಯವಿದೆ. ಸರ್ಕಾರಿ ಶಾಲಾ ಶಿಕ್ಷಕರು ತಮ್ಮ ಒಂದು ತಿಂಗಳ ವೇತನ ಹಾಗೂ ಉದ್ಯಮಿದಾರರು ತಮ್ಮ ಒಂದು ತಿಂಗಳ ಲಾಭಾಂಶವನ್ನು ಸರ್ಕಾರಿ ಶಾಲೆಗಳಿಗೆ ನೀಡಿದರೆ ಶೈಕ್ಷಣಿಕ ಕ್ರಾಂತಿಯೇ ಉಂಟಾಗುತ್ತದೆ. ದೆಹಲಿ ಶಾಲೆಗಳನ್ನು ಮೀರಿಸುವಷ್ಟರ ಮಟ್ಟಿಗೆ ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಿನುಗುವ ಕ್ರಾಂತಿ ಸೂರ್ಯರಾಗುತ್ತಾರೆಂದರು.

ದೆಹಲಿ, ಆಂಧ್ರಪ್ರದೇಶ, ಕೇರಳ ಮತ್ತಿತರೆ ರಾಜ್ಯಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತದೆ. ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳಿಗೆ ಸರಿಸಮನಾಗಿ ಅಭಿವೃದ್ಧಿಪಡಿಸ ಲಾಗುತ್ತಿದೆ. ಆದರೆ, ಕರ್ನಾಟಕದಲ್ಲಿ ಸರ್ಕಾರ 13 ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚಲು ಹೊರಟಿತ್ತು. ಅದನ್ನು ವಿರೋಧಿಸಿ ಕವಿತೆ ಬರೆದಿದ್ದಕ್ಕೆ ನನ್ನ ವಿರುದ್ಧ ಕ್ರಮಕ್ಕೆ ಮುಂದಾಗಿತ್ತು. ನಾಡಿನ ಜನರ ಒಕ್ಕೊರಲಿನ ಕೂಗಿಗೆ ಸರ್ಕಾರ ಮಣಿಯಬೇಕಾಯಿತು ಎಂದು ಹೇಳಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್ ಮಾತನಾಡಿ, ಹಿಂದೆ ಅಂಕ ಗಳಿಕೆಗೆ ಯಾವುದೇ ಮಾನದಂಡವಿರಲಿಲ್ಲ. ಆದರೆ ಇಂದು ಅಂಕ ಗಳಿಕೆ ಪ್ರಮುಖವಾಗಿದೆ. ಬೇರೆ ವಿದ್ಯಾರ್ಥಿಗಳೊಂದಿಗೆ ಯಾರೂ ತಮ್ಮನ್ನು ಹೋಲಿಕೆ ಮಾಡಿಕೊಳ್ಳಬಾರದು. ಪ್ರತಿಯೊಬ್ಬರಲ್ಲೂ ಅಗಾಧವಾದ ಪ್ರತಿಭೆ ಅಡಗಿರುತ್ತದೆ. ಅದನ್ನು ಹೊರ ಹಾಕುವ ಕೆಲಸವನ್ನು ಮಾಡಬೇಕೆಂದರು.

ಪೋಷಕರೂ ಸಹ ಮಕ್ಕಳ ಓದಿನ ಕಡೆ ಹೆಚ್ಚು ಗಮನಹರಿಸಬೇಕು. ಅವರನ್ನು ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ಮೊಬೈಲ್ ಬಳಕೆ ಒಳ್ಳೆಯ ಉದ್ದೇಶಕ್ಕೆ ಮಾತ್ರ ಇರಲಿ ಎಂದು ಸಲಹೆ ನೀಡಿದರು.

ದಾವಣಗೆರೆಯ ಜೈನ್ ಪಾಲಿ ಪ್ಯಾಕ್ ಮಾಲೀಕರಾದ ಕೋಮಲ್ ಕುಂದಪ್ಪ ಜೈನ್ ಅವರಿಗೆ 'ಸಾಮಾಜಿಕ ಸೇವಾ ರತ್ನ' ಪ್ರಶಸ್ತಿ ನೀಡಲಾಯಿತು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಡಾ.ಎಸ್.ಎ. ಗಿರಿಧರ್, ಹೆಚ್.ವಿ. ಶ್ರೀನಿವಾಸ್ ಕಕ್ಕರಗೊಳ್ಳ, ಮಹಾದೇವ, ಬಸವರಾಜ್ ಸಾಗರ್, ಬಿ.ಎಂ. ಶಿವಕುಮಾರ್, ಎಸ್.ಕೆ. ಒಡೆಯರ್, ವಿಜಯಕುಮಾರ್ ಜಾಧವ್, ರಮೇಶ್, ವೈ.ಎಲ್. ಹನುಮಂತರಾಜ್ ಇವರನ್ನು ಕರವೇ ವತಿಯಿಂದ ಗೌರವ ಸನ್ಮಾನ ಮಾಡಲಾಯಿತು.

ಆರ್.ಟಿ.ಎಸ್. ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಆರ್.ಜಿ. ಶ್ರೀನಿವಾಸಮೂರ್ತಿ ಮಾತನಾಡಿದರು. ಕರವೇ ಗೌರವಾಧ್ಯಕ್ಷ ವಾಸುದೇವ ರಾಯ್ಕರ್ ಅಧ್ಯಕ್ಷತೆ ವಹಿಸಿದ್ದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಇಲಾಖೆ ಜಿಲ್ಲಾ ಅಧಿಕಾರಿ ಡಾ. ಕೆ.ಕೆ. ಪ್ರಕಾಶ್, ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ, ಪದಾಧಿಕಾರಿಗಳಾದ ಬಸಮ್ಮ, ಮಂಜುಳಾ ಗಣೇಶ್, ಮಂಜುಳಾ ಮಹಾಂತೇಶ್, ಧರ್ಮರಾಜ್, ನಾಗಮ್ಮ, ಶಶಿಕುಮಾರ್, ರವಿಕುಮಾರ್, ಲೋಕೇಶ್, ಸುರೇಶ್, ನಿಂಗರಾಜ್, ಜಬೀವುಲ್ಲಾ, ಗೋಪಾಲ ದೇವರಮನಿ, ಸಂಗೀತ ನರೇಂದ್ರ ಜೈನ್, ಶ್ರೀನಿವಾಸ ಚಿನ್ನಿಕಟ್ಟೆ, ಓ. ಮಹೇಶ್ವರಪ್ಪ, ಮಂಜುನಾಥ್, ಪರಮೇಶ್ ಮತ್ತಿತರರಿದ್ದರು.

ಶ್ರೀಕಾಂತ್ ಭಟ್ ನಿರೂಪಿಸಿದರು. ರಾಮೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಕೆ.ಎ. ಭಾಗ್ಯಶ್ರೀ ಅನಿಸಿಕೆ ವ್ಯಕ್ತಪಡಿಸಿದರು.

## ದೇವಸ್ಥಾನ ಟ್ರಸ್ಟ್ ಹೆಸರಿನಡಿ ಅನಾಮಧೇಯ ಚಂದಾ ವಸೂಲಿ : ಮನವಿ

ದಾವಣಗೆರೆ, ಸೆ.1- ನಗರದ ಶಾಮನೂರು ರಸ್ತೆಯಲ್ಲಿರುವ ಶ್ರೀ ಮಹಾಗಣಪತಿ - ಶ್ರೀ ವೀರಭದ್ರೇಶ್ವರ ಸೇವಾ ಟ್ರಸ್ಟ್ ಹೆಸರಿನಲ್ಲಿ ಅನಾಮಧೇಯ ವ್ಯಕ್ತಿಗಳು ಚಂದಾ - ದೇಣಿಗೆಯನ್ನು ಪಡೆಯುತ್ತಿದ್ದಾರೆಂದು ಟ್ರಸ್ಟ್‌ನ ಗಮನಕ್ಕೆ ಬಂದಿದ್ದು, ಈ ಕುರಿತು ಟ್ರಸ್ಟ್ ಭಕ್ತರ ಬಳಿ ಹೋಗಿ ಚಂದಾ - ದೇಣಿಗೆಯನ್ನು ಸಂಗ್ರಹಿಸುತ್ತಿಲ್ಲ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಸದ್ಭಕ್ತರು ಸೇವಾ ಕಾರ್ಯಕ್ಕಾಗಿ ಚಂದಾ - ದೇಣಿಗೆ ಹಣವನ್ನು ನೀಡಲು ಇಚ್ಛಿಸಿದ್ದಲ್ಲಿ ದೇವಸ್ಥಾನದಲ್ಲಿಯೇ ಅರ್ಚಕರ ಬಳಿ ನೀಡಿ ರಸೀದಿ ಪಡೆದುಕೊಳ್ಳಬೇಕು ಎಂದು ಪ್ರಕಟಣೆ ಕೋರಿದೆ.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಅಮಾವಾಸ್ಯೆ



ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಬೆನಕನ ಅಮಾವಾಸ್ಯೆ ಪ್ರಯುಕ್ತ ಶ್ರೀ ಮಾತಾ ಅನ್ನಪೂರ್ಣೇಶ್ವರಿ ಅಮ್ಮನವರಿಗೆ 108 ಲೀಟರ್ ಹಾಲಿನ ಅಭಿಷೇಕ, ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇ ಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್. ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ವಸಂತ ಬಾಯಿ ವಸಂತರಾವ್ ಸಬಾಳೆ ಮತ್ತು ಕುಟುಂಬ ದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## 16ನೇ ವಾರ್ಡ್ ವಿನೋಬನಗರದಲ್ಲಿ ಕಾಮಗಾರಿ ಪರಿಶೀಲಿಸಿದ ಆಯುಕ್ತರು



ದಾವಣಗೆರೆ, ಸೆ. 1- ಇಲ್ಲಿನ ವಿನೋಬನಗರ ವಾರ್ಡ್ ನಂ. 16ರ 1ನೇ ಮುಖ್ಯರಸ್ತೆಯಲ್ಲಿ ಎಸ್‌ಎಫ್‌ಸಿ ಅನುದಾನದ 1 ಕೋಟಿ ರೂ. ವೆಚ್ಚದ ಸಿಸಿ ಚರಂಡಿ ಕಾಮಗಾರಿಯನ್ನು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಪಾಲಿಕೆ ಸದಸ್ಯ ಎ. ನಾಗರಾಜ್ ಅವರು ನಿನ್ನೆ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಎಇಇ ಜಗದೀಶ್, ಇಇ ಉದಯಕ್‌ಕುಮಾರ್, ಎಇ ನವೀನ್‌ಕುಮಾರ್, ಮಾರುತಿ, ರವಿಕುಮಾರ್, ಜಲಸಿರಿಯ ಪ್ರಶಾಂತ್, ವಿದ್ಯಾಧರ್, ರೇಣುಕಾನಂದ್, ಗಣೇಶ್, ಗುತ್ತಿಗೆದಾರರಾದ ಕುಮಾರ್, ಮಂಜುನಾಥ್, ಹೆಲ್ತ್ ಇನ್ಸ್‌ಪೆಕ್ಟರ್ ಉಮ್ಲಾನಾಯ್ಕ ಉಪಸ್ಥಿತರಿದ್ದರು.

## ಚಿಗಟೇರಿ ಆಸ್ಪತ್ರೆಗೆ ಡಿಸಿ ಅನಿರೀಕ್ಷಿತ ಭೇಟಿ



ದಾವಣಗೆರೆ, ಸೆ.1- ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಗುರುವಾರ ರಾತ್ರಿ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಸ್ಪತ್ರೆಯನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಮತ್ತು ಚಿಕಿತ್ಸೆಗಾಗಿ ಬರುವವರಿಗೆ ಸಕಾಲಕ್ಕೆ ಚಿಕಿತ್ಸೆ ಲಭ್ಯವಾಗಬೇಕು. ತುರ್ತು ನಿಗಾ ಘಟಕದಲ್ಲಿ ಸಿಬ್ಬಂದಿಗಳು ಹೆಚ್ಚಿನ ನಿಗಾವಹಿಸಬೇಕು. ರೋಗಿಗಳಿಗೆ ಯಾವುದೇ ಔಷಧದ ಕೊರತೆಯಾಗದಂತೆ ನೋಡಿಕೊಂಡು ಔಷಧ ಅಗತ್ಯವಿದ್ದಲ್ಲಿ ನಮ್ಮ ಗಮನಕ್ಕೆ ತರಬೇಕೆಂದು ಸೂಚನೆ ನೀಡಿ, ರಾತ್ರಿ ವೇಳೆಯಲ್ಲಿ ಭದ್ರತಾ ದೃಷ್ಟಿಯಿಂದ ಸಿಸಿ ಕ್ಯಾಮೆರಾ ಅಳವಡಿಕೆ ಹೆಚ್ಚಿಸಿ ಹೆಚ್ಚುವರಿ ಭದ್ರತಾ ಸಿಬ್ಬಂದಿಗಳನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿ, ಮುಂದಿನ ದಿನಗಳಲ್ಲಿ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಲಿದ್ದು, ಸಿಬ್ಬಂದಿಗಳು ಬಹಳ ಎಚ್ಚರಿಕೆಯಿಂದಿರಬೇಕೆಂದು ಸೂಚನೆ ನೀಡಿದರು.

ಈ ವೇಳೆ ಜಿಲ್ಲಾ ಸರ್ಜನ್ ಡಾ.ನಾಗೇಂದ್ರಪ್ಪ ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.

## ವೈಆರ್‌ಪಿ ಕರಾಟೆ ಆ್ಯಂಡ್ ಸೆಲ್ಫ್ ಡಿಫೆನ್ಸ್ ಫೆಡರೇಷನ್‌ಗೆ ಚಿನ್ನ



ದಾವಣಗೆರೆ, ಸೆ.1- ನಗರದಲ್ಲಿ ಈಚೆಗೆ ನಡೆದ 'ಬೆಣ್ಣೆನಗರಿ ರಾಷ್ಟ್ರ ಮಟ್ಟದ ಮುಕ್ತ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಇಲ್ಲಿನ ವೈಆರ್‌ಪಿ ಕರಾಟೆ ಆ್ಯಂಡ್ ಸೆಲ್ಫ್ ಡಿಫೆನ್ಸ್ ಫೆಡರೇಷನ್‌ನ ಕ್ರೀಡಾಪಟುಗಳು ಕತಾ ಮತ್ತು ಕುಮಿತೆ ವಿಭಾಗದಲ್ಲಿ ಭಾಗವಹಿಸಿ 8 ಚಿನ್ನ, 5 ಬೆಳ್ಳಿ ಹಾಗೂ 16 ಕಂಚಿನ ಪದಕ ಗಳಿಸಿ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ.

## ಜೀವಮಾನ ಸಾಧನೆ ಹಾಗೂ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಸೆ. 1 - 2023 ನೇ ಸಾಲಿಗೆ ಜೀವಮಾನ ಸಾಧನೆ ಹಾಗೂ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸುವ ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

ಅರ್ಹರು ವೆಬ್‌ಸೈಟ್: https://sevasindhuserviceskarnataka.gov.in ನಲ್ಲಿ ಇದೇ ದಿನಾಂಕ 20 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ 08192-237480 ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮೀಬಾಯಿ ತಿಳಿಸಿದ್ದಾರೆ.

## ಮಲೇಬೆನ್ನೂರು : ವಲಯ ಮಟ್ಟದ ಕ್ರೀಡಾಕೂಟ

ನೀರಾವರಿ ಇಲಾಖೆಯ ಮೈದಾನದಲ್ಲಿ ಮತ್ತು ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಹಾಗೂ ಜಾಮೀಯಾ ನ್ಯಾಷನಲ್ ಪ್ರೌಢಶಾಲೆ ಆವರಣದಲ್ಲಿ ಇಂದು ಬೆಳಿಗ್ಗೆ 10 ಗಂಟೆಯಿಂದ ಮಲೇಬೆನ್ನೂರು ವಲಯ ಮಟ್ಟದ ಕ್ರೀಡಾಕೂಟಗಳು ನಡೆಯಲಿವೆ. ಈ ವೇಳೆ ಹರಿಹರ ತಾಲ್ಲೂಕು ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ನೌಕರರ ಒಕ್ಕೂಟದಿಂದ ದೈಹಿಕ ಶಿಕ್ಷಕರಿಗೆ ಸಮವಸ್ತ್ರಗಳನ್ನು ಉಚಿತವಾಗಿ ವಿತರಿಸಲಾಗುವುದೆಂದು ಒಕ್ಕೂಟದ ಅಧ್ಯಕ್ಷ ಕೆ. ಭೀಮಪ್ಪ ತಿಳಿಸಿದ್ದಾರೆ.

# ತುಂಗಾರತಿ ಪ್ರವೇಶ ನಿಷೇಧ : ಸಾರ್ವಜನಿಕರ ಆಕ್ರೋಶ

**ಹರಿಹರ**



ಹರಿಹರ, ಸೆ.1- ಶ್ರಾವಣ ಮಾಸದ ನಿಮಿತ್ತ ಪ್ರತಿವರ್ಷ ತುಂಗಭದ್ರಾ ನದಿಗೆ ಪೂಜೆಗೆ ಬರುವಂತ ದೇವರಿಗೆ, ಪೂಜೆ ಮಾಡಿಕೊಂಡು ಹೋಗುವುದಕ್ಕೆ ತುಂಗಾರತಿ ಸ್ಥಳದಲ್ಲಿ ಅವಕಾಶ ನೀಡದೇ ಇರುವುದರಿಂದ ವಿವಿಧ ಗ್ರಾಮಗಳಿಂದ ದೇವರನ್ನು ಕರೆತಂದ ಭಕ್ತರು ತುಂಗಾರತಿ ಸ್ಥಳದಲ್ಲಿ ದೇವರನ್ನು ರಸ್ತೆಯಲ್ಲಿ ನಿಲ್ಲಿಸಿಕೊಂಡು ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು.

ಈ ವೇಳೆ ಎಮ್ಮನಬೇತೂರು ಗ್ರಾಮದ ರೇವಣಸಿದ್ದಪ್ಪ ಮಾತನಾಡಿ, ಶ್ರಾವಣ ಮಾಸದಲ್ಲಿ ಪ್ರತಿ ವರ್ಷವೂ ನಮ್ಮ ಗ್ರಾಮದ ವತಿಯಿಂದ, ಗ್ರಾಮದ ಎಲ್ಲಾ ದೇವರನ್ನು ತುಂಗಭದ್ರಾ ನದಿಯ ತಟದಲ್ಲಿ ಇಟ್ಟು, ಪೂಜೆ ಮಾಡಿಕೊಂಡು ಹೋಗವಂತಹ ಪದ್ಧತಿಯು ಹಲವಾರು ವರ್ಷಗಳಿಂದ ನಡೆದುಕೊಂಡು ಬರಲಾಗುತ್ತಿದೆ. ಅದರ ಅನ್ವಯದಂತೆ ಈ ವರ್ಷವೂ ಸಹ ಗ್ರಾಮದ 8 ದೇವಸ್ಥಾನದ ದೇವರನ್ನು ತುಂಗಭದ್ರಾ ನದಿಯ ಸ್ಥಳಕ್ಕೆ ತಂದಿದ್ದು, ಆದರೆ ಇಲ್ಲಿನ ಸ್ಥಳದಲ್ಲಿ ತುಂಗಾರತಿ ಕಾಮಗಾರಿ ನಡೆಯುತ್ತಿರುವುದರಿಂದ, ನದಿಯ ಹತ್ತಿರಕ್ಕೆ ಯಾರನ್ನೂ ಬಿಡುವುದಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಹೇಳಿದರು.

ಟೂರಿಸ್ಟ್ ಪೊಲೀಸ್ ಸಿಬ್ಬಂದಿ ವಿಜಯಲಕ್ಷ್ಮಿ ಮಾತನಾಡಿ, ನಮಗೆ ನಮ್ಮ ಹಿರಿಯ ಅಧಿಕಾರಿಗಳು ಏನು ಆದೇಶ ನೀಡಿರುತ್ತಾರೆ, ಅದನ್ನು ಪಾಲನೆ ಮಾಡುವುದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿದರು.

ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ ಮಾತನಾಡಿ, ತುಂಗಾರತಿ ಸ್ಥಳದಲ್ಲಿ ಗುಟ್ಕಾ, ಎಲೆ ಅಡಿಕೆ ತಿಂದು ಉಗುಳುವುದು, ಎಲ್ಲೆಂದರಲ್ಲಿ ಕಸವನ್ನು ಹಾಕುವುದು, ಈ ತರಹ ಯಾವುದೇ ರೀತಿಯ ಗಲೀಜು ಮಾಡದಂತೆ ತಿಳಿಸಿದ ನಂತರ ಎಮ್ಮನಬೇತೂರು ಗ್ರಾಮದ ದೇವರುಗಳಿಗೆ ನದಿ ದಂಡೆಯ ಮೇಲೆ ಪೂಜೆ ಮಾಡಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಲಾಯಿತು.


ಈ ಸಂದರ್ಭದಲ್ಲಿ ರಾಘವೇಂದ್ರ ಸ್ವಾಮಿ ಮಠದ ಅರ್ಚಕ ಪವನ್ ಕುಮಾರ್, ಪೊಲೀಸ್ ಸಿಬ್ಬಂದಿ ರವಿಕುಮಾರ್, ಎಮ್ಮನಬೇತೂರು ಗ್ರಾಮದ ಕರಿಬಸಪ್ಪ, ಅಜ್ಜಯ್ಯ, ರೇವಣ ಸಿದ್ದಪ್ಪ, ಕಲ್ಲೇಶ್, ಗಗನ್, ಸಿದ್ದೇಶ್, ಮಲ್ಲಿಕಾರ್ಜುನ್ ಇತರರು ಹಾಜರಿದ್ದರು.

## ಹರಿಹರದಲ್ಲಿ ಇಂದು ಶಾಂತಿ ಸೌಹಾರ್ದ ಸಭೆ

ಗೌರಿ - ಗಣೇಶ ಹಾಗೂ ಈದ್ ಮಿಲಾದ್ ಹಬ್ಬದ ಪ್ರಯುಕ್ತ ಶಾಂತಿ ಸೌಹಾರ್ದ ಸಭೆಯನ್ನು ಇಂದು ಸಂಜೆ 4 ಗಂಟೆಗೆ ಪೊಲೀಸ್ ಠಾಣೆ ಆವರಣದಲ್ಲಿ ಹಮ್ಮಿಕೊಂಡಿದ್ದು, ಈ ಸಭೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಗ್ರಾಮಾಂತರ ಡಿವೈಎಸ್ಪಿ ಬಿ. ಎಸ್.ಬಸವರಾಜ್, ತಹಸಿಲ್ದಾರ್ ಗುರು ಬಸವರಾಜ್, ನಗರಸಭೆ ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ಬೆಸ್ಕಾಂ ಇಲಾಖೆಯ ಎಇಇ, ಅಗ್ನಿಶಾಮಕ ದಳದ ಸಂಜೀವ್ ಕುಮಾರ್ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳು ಭಾಗವಹಿಸುವರು ಎಂದು ಹರಿಹರ ನಗರ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಎಸ್.ದೇವಾನಂದ್ ತಿಳಿಸಿದ್ದಾರೆ.

# ಯುವಕರು ಅಧ್ಯಾತ್ಮಿಕ ಚಿಂತನೆ ಮೈಗೂಡಿಸಿಕೊಳ್ಳಬೇಕು

## ಮಾಯಕೊಂಡ : ಈಶ್ವರೀಯ ವಿಶ್ವವಿದ್ಯಾಲಯದ ರಕ್ಷಾಬಂಧನ ಕಾರ್ಯಕ್ರಮದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ



ಮಾಯಕೊಂಡ, ಸೆ.1- ಬ್ರಹ್ಮಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯ ಲಕ್ಷಾಂತರ ಯುವಕರನ್ನು ಪರಿವರ್ತಿಸಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಪ್ರಶಂಸಿಸಿದರು.

ಇಲ್ಲಿನ ಸಮುದಾಯ ಭವನದಲ್ಲಿ ಬ್ರಹ್ಮಾಕುಮಾರೀಸ್ ಈಶ್ವರೀಯ ವಿಶ್ವ ವಿದ್ಯಾಲಯದ ರಕ್ಷಾ ಬಂಧನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದುಶ್ಚಟಕ್ಕೆ ಬಲಿಯಾಗಿ ದಾರಿ ತಪ್ಪಿದವರೂ ಬ್ರಹ್ಮಾ ಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯದ ಮಾರ್ಗದರ್ಶನದಿಂದ ಸರಿದಾರಿಯಲ್ಲಿ ನಡೆಯುತ್ತಿದ್ದಾರೆ. ಈಶ್ವರೀಯ ವಿಶ್ವವಿದ್ಯಾಲಯ ಲಕ್ಷಾಂತರ ಯುವಕರನ್ನು ಪರಿವರ್ತಿಸಿದೆ. ಸಮಾಜದಲ್ಲಿ ಶಾಂತಿ ನಿರ್ಮಾಣಕ್ಕೆ ಎಲ್ಲರೂ ಸಹ ಆಧ್ಯಾತ್ಮಿಕ ಚಿಂತನೆ ಮೈಗೂಡಿಸಿಕೊಳ್ಳಬೇಕು. ಈ ಸಂಸ್ಥೆ ಲಕ್ಷಾಂತರ ಶಾಖೆ ಹೊಂದಿದ್ದರೂ, ಮಹಿಳೆಯರು ಇದನ್ನು ನಿಭಾಯಿಸುತ್ತಿದ್ದಾರೆ. ಜೈಲಿನಲ್ಲಿರುವ ಕೈದಿಗಳ ಮನಪರಿವರ್ತನೆ ಮಾಡಿದ್ದಾರೆ. ಗಾಂಧಿಯ ಅಹಿಂಸಾತ್ಮಕ ಹೋರಾಟದಂತೆ ಬ್ರಹ್ಮಾ ಕುಮಾರೀಸ್ ಸಂಸ್ಥೆ ಶಾಂತಿಯಿಂದ ಜನ ಪರಿವರ್ತನೆ ಮಾಡುತ್ತಿದ್ದಾರೆ ಎಂದರು. ಮನುಷ್ಯರಲ್ಲಿ ಸಹೋದರ ಸಂಬಂಧಗಳು ಶಾಶ್ವತವಾಗಿ ಉಳಿಯಬೇಕು ಎಂದು ಬಸವಂತಪ್ಪ ಹೇಳಿದರು.

ಕಾಂಗ್ರೆಸ್ ಮುಖಂಡ ಬಿ.ಟಿ.ಹನುಮಂತಪ್ಪ, ಅಧ್ಯಾತ್ಮಕ್ಕೆ ಮಾನವರನ್ನು ದೇವರನ್ನಾಗಿಸುವ ಶಕ್ತಿಯಿದೆ. ಧ್ಯಾನದಿಂದ ಮನಶ್ಯಾಂತಿ ಪಡೆಯಬಹುದು. ರಕ್ಷಾ ಬಂಧನ ಆಧ್ಯಾತ್ಮಿಕ ಬಂಧನ. ಸಂಸ್ಕೃತಿ, ಸಂಸ್ಕಾರ ಕಲಿಯಲು ಈಶ್ವರೀಯ ವಿದ್ಯಾಲಯ ಸಹಕಾರಿ ಎಂದರು.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉಪನ್ಯಾಸಕರಾದ ಉಮಾದೇವಿ ಪ್ರಸ್ತಾವಿಕ ಮಾತನಾಡಿದರು. ರೇಖಾ ವಂದಿಸಿದರು.

ಗ್ರಾಮ ಪಂಚಾಯತಿ ಅಧ್ಯಕ್ಷರಾದ ಲತಾ ಮಲ್ಲಿಕಾರ್ಜುನ್, ಉಪಾಧ್ಯಕ್ಷೆ ಶಿವಮ್ಮ ಮಲ್ಲಿಕಪ್ಪ, ಗ್ರಾಮ ಪಂಚಾಯತಿ ಸದಸ್ಯರಾದ ವಗ್ಗಪ್ಪರ ಮಲ್ಲಪ್ಪ, ಬಸವರಾಜಪ್ಪ, ಎಎಸ್‌ಐ ಹೇಮ್ಲಾ, ಮುಖಂಡರಾದ ಗೋಪಾಲ್, ಕಾಟೇಹಳ್ಳಿ ಹನುಮಂತಪ್ಪ, ಪೋಸ್ಟ್ ಚಂದ್ರಪ್ಪ, ಗಣೇಶಪ್ಪ, ಲೋಕಿಕೆರೆ ಶಂಕರಪ್ಪ, ಹಾಲೇಶಪ್ಪ, ರಂಗಣ್ಣ ಗಂಗನಕಟ್ಟೆ ಆನಂದಪ್ಪ ಮತ್ತಿತರರಿದ್ದರು.

## ಬೈಕ್ ವ್ಹೀಲಿಂಗ್ : ಚನ್ನಗಿರಿಯ ಇಬ್ಬರಿಗೆ ಪ್ರಕರಣ ದಾಖಲು

ಚನ್ನಗಿರಿ, ಸೆ.1- ಬೈಕ್ ವ್ಹೀಲಿಂಗ್ ಮಾಡುತ್ತಿದ್ದ ಚನ್ನಗಿರಿಯ ವಿ.ಆರ್. ಬಡಾವಣೆಯ ತೌಫಿಕ್ ಅಹ್ಮದ್ ಹಾಗೂ ಮೊಹಮ್ಮದ್ ತೌಹೀದ್ ಮೇಲೆ ಪೊಲೀಸರು ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಂಡಿದ್ದಾರೆ.

ಚನ್ನಗಿರಿ ಕಡೆಯಿಂದ ಅಜ್ಜಿಹಳ್ಳಿ ಗ್ರಾಮದ ಕಡೆ ಹೋಗುವಾಗ ಬೈಕ್ ಸವಾರ ತನ್ನ ಬೈಕ್ ಹಿಂಬದಿಯಲ್ಲಿ ಇನ್ನೊಬ್ಬನನ್ನು ಕೂರಿಸಿಕೊಂಡು ವೇಗವಾಗಿ ಚಾಲನೆ ಮಾಡುತ್ತಾ ಕೇಕೆ ಹಾಕುತ್ತಾ, ಬೈಕ್ ಮುಂದಿನ ಗಾಲಿ ಹಾರಿಸಿಕೊಂಡು ಬೈಕ್ ವ್ಹೀಲಿಂಗ್ ಮಾಡುತ್ತಾ, ರಸ್ತೆಯಲ್ಲಿನ ಇತರೆ ವಾಹನ ಸವಾರರಿಗೆ ತೊಂದರೆ ಮಾಡುತ್ತಿದ್ದ. ಈ ವೇಳೆ ಅವನನ್ನು ತಡೆದು ದಾಖಲೆ ಕೇಳಿದಾಗ ಯಾವುದೇ ದಾಖಲೆಗಳಿರಲಿಲ್ಲ. ಸಂಚಾರಿ ನಿಯಮ ಉಲ್ಲಂಘಿಸಿದ ಕಾರಣ ಇವರ ಮೇಲೆ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

## ಜಯದೇವ ಶ್ರೀಗಳ ಪ್ರತಿಮೆಗೆ ಪುಷ್ಪ ನಮನ



ದಾವಣಗೆರೆ, ಸೆ.1- ಜಯದೇವ ಪ್ರಸಾದ ನಿಲಯಗಳನ್ನು ಸ್ಥಾಪಿಸುವ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡಿ, ಲಕ್ಷಾಂತರ ಯುವಕ ದಾರಿಗೆ ಬೆಳಕಾದ ಶ್ರೀ ಜಯದೇವ ಜಗದ್ಗುರುಗಳ 150ನೇ ಜನ್ಮ ದಿನದ ಅಂಗವಾಗಿ ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಜಯದೇವ ಸ್ವಾಮೀಜಿ ಕಂಚಿನ ಪ್ರತಿಮೆಗೆ ಶಿವಸಿಂಪಿ ಸಮಾಜದ ಅಧ್ಯಕ್ಷರ ಚಿಂದೋಡಿ ಚಂದ್ರಧರ್ ನೇತೃತ್ವದಲ್ಲಿ ಪುಷ್ಪ ನಮನ ಸಲ್ಲಿಸಲಾಯಿತು. ಈ ವೇಳೆ ಸಮಾಜದ ಮುಖಂಡರು, ಜಯದೇವ ಪ್ರಸಾದ ನಿಲಯದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



## ಹರಿಹರ : ದೇಶ ಸೇವೆ ಮುಗಿಸಿ ನಗರಕ್ಕೆ ಆಗಮಿಸಿದ ಯೋಧ ಸತ್ಯನಾರಾಯಣ್ ಅವರಿಗೆ ಸ್ವಾಗತ

ಹರಿಹರ, ಸೆ.1- ದೇಶದ ಸೈನಿಕ ವೃತ್ತಿಯಲ್ಲಿ 18 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿ, ಮರಳಿ ನಗರಕ್ಕೆ ಆಗಮಿಸಿದ ಯೋಧ ಸತ್ಯನಾರಾಯಣ್ ಅವರೆಗೆ ನಗರದ ಸೈನಿಕ ಅಭಿಮಾನಿಗಳ ವತಿಯಿಂದ ಅದ್ಧೂರಿಯಾಗಿ ಮೆರವಣಿಗೆ ಮೂಲಕ ಬರ ಮಾಡಿಕೊಳ್ಳಲಾಯಿತು.

ಮೆರವಣಿಗೆ ವಿವಿಧ ಕಲಾ ತಂಡಗಳೊಂದಿಗೆ ನಗರದ ರೈಲ್ವೆ ಸ್ಟೇಷನ್‌ನಿಂದ ಆರಂಭಗೊಂಡು ಹಳೆ ಪಿ.ಬಿ ರಸ್ತೆ, ಗಾಂಧಿ ವೃತ್ತ, ರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ರಸ್ತೆಯ ಮುಖಾಂತರ ಹಾದು ವಿದ್ಯಾನಗರದ 'ಸಿ' ಬ್ಲಾಕ್‌ನಲ್ಲಿರುವ ಯೋಧರ ಮನೆಗೆ ಅಂತ್ಯಗೊಂಡಿತು.

ಈ ಸಂದರ್ಭದಲ್ಲಿ ಯೋಧ ಬಸವರಾಜ್ ಗುತ್ತೂರು ನಿವೃತ್ತ ಯೋಧರ ಅಭಿಮಾನ ಬಳಗದ ಪರಶುರಾಮ್, ಶಿವು, ನವೀನ್, ವಿನಾಯಕ, ಹನುಮಂತ, ಲೋಹಿತ್, ಸುಭಾಷ್, ಗುಡದಯ್ಯ, ಕೇಶವ್, ಹನುಮಂತಪ್ಪ, ಪವನ್, ಶ್ರೀಕಾಂತ್, ಈಚಲಮ್ಮ ಕೊರಚರ ಕ್ಷೇಮಾಭಿವೃದ್ಧಿ ಸಂಘ ರಾಣೇಬೆನ್ನೂರು ಇತರರು ಹಾಜರಿದ್ದರು.



## ಸಂಕ್ಲೀಪುರದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ

ಮಲೇಬೆನ್ನೂರು, ಸೆ.1- ಸಂಕ್ಲೀಪುರ ಗ್ರಾಮದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಅಂಗನವಾಡಿ ಮಕ್ಕಳನ್ನು ಕೃಷ್ಣ ಮತ್ತು ರಾಧೆಯರನ್ನಾಗಿ ಅಲಂಕಾರ ಮಾಡಿ ಗಮನ ಸೆಳೆದರು.

## 'ವಿಶ್ವ ತೆಂಗು ದಿನಾಚರಣೆ'



ಕಲ್ಪವೃಕ್ಷ ಎಂದು ಕರೆಯುವ ತೆಂಗನ್ನು ಮನುಷ್ಯ ತನ್ನ ಅನೇಕ ವಸ್ತುಗಳನ್ನು ತಂಗಿನಲ್ಲಿ ಉಪಯೋಗಿಸಿ ಕೊಳ್ಳುತ್ತಿದ್ದಾನೆ. ತಾಯಿಯ ಎದೆ ಹಾಲಿನ ನಂತರ ಅತ್ಯಂತ ಹೆಚ್ಚು ಪೋಷಕಾಂಶಗಳನ್ನು ತೆಂಗು ಒಳಗೊಂಡಿದೆ. ಪ್ರತಿ ವರ್ಷ ಸೆಪ್ಟಂಬರ್ 2 ರಂದು 'ವಿಶ್ವ ತೆಂಗು ದಿನ'ವನ್ನಾಗಿ ಆಚರಿಸಲಾಗುತ್ತದೆ.

ತೆಂಗಿನ ಮರದಿಂದ ಆಹಾರ, ಪಾನೀಯ, ಸೌದೆ, ಮನೆ ಕಟ್ಟಲು ಮರ ಮುಟ್ಟು, ಕೈಗಾರಿಕೆಗೆ ಕಚ್ಚಾ ವಸ್ತು, ಸಿಪ್ಪೆಯ ಉತ್ಪನ್ನಗಳು, ಮೌಲ್ಯವರ್ಧಿತ ಪದಾರ್ಥಗಳು ಮತ್ತು ರೋಗ ನಿರೋಧಕ ಶಕ್ತಿ ಹೊಂದಿದೆ. ತೆಂಗಿನ ಕಾಯಿಯ ಹಾಲನ್ನು ಮಕ್ಕಳಿಗೆ ನೀಡುವುದರಿಂದ ಮೂಳೆಗಳು ಬಲಿಷ್ಠವಾಗುತ್ತವೆ. ನಾರಿನ ವಂಶವಿರುವುದರಿಂದ ಮಲಬದ್ಧತೆ ನಿವಾರಿಸುತ್ತದೆ.

ನಾವು ತೆಂಗನ್ನು ಎಟಿಎಂ ಯಂತ್ರದಂತೆ ಬಳಸುತ್ತಿದ್ದು, ತೆಂಗಿನ ಕಾಯಿ ಕೆಡುತ್ತಿದ್ದೇವೆ ಹೊರತು, ಅದಕ್ಕೆ ಬೇಕಾದ ಪೋಷಕಾಂಶಗಳನ್ನು ವಾಪಸ್ ಡೆಪಾಸಿಟ್ ಮಾಡುತ್ತಿಲ್ಲ. ರಾಜ್ಯದಲ್ಲಿ 6.24 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮೆಟ್ರಿಕ್ ಟನ್ ಉತ್ಪಾದನೆಯಾಗುತ್ತಿದೆ. ದಾವಣಗೆರೆಯಲ್ಲಿ ಸುಮಾರು 9305 ಹೆಕ್ಟೇರ್ ಪ್ರದೇಶದಲ್ಲಿ 47,602 ಮೆಟ್ರಿಕ್ ಟನ್ ಉತ್ಪಾದನೆ ಆಗುತ್ತದೆ. 90 ರಷ್ಟು ಖಾದ್ಯಗಳ ತಯಾರಿಕೆ. ವಿವಿಧ ಭಕ್ಷ್ಯಗಳ ತಯಾರಿಕೆಯಲ್ಲಿ ಬಳಕೆಯಾಗುತ್ತಿದೆ. ತೆಂಗಿನ ಎಣ್ಣೆ ಕೂಡ ಹಲವು ರೀತಿಯ ಉಪಯೋಗಗಳನ್ನು ಹೊಂದಿದೆ ಮತ್ತು ಪೋಷಕಾಂಶಗಳು ಸಮೃದ್ಧವಾಗಿವೆ.

ತೆಂಗನ್ನು ಭಾರತದ ಕರ್ನಾಟಕ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಪ್ರದೇಶಗಳಲ್ಲಿ ಬೆಳೆಯುತ್ತಾರೆ.

ತೆಂಗಿನ ಎಣ್ಣೆ ಚರ್ಮ ಮತ್ತು ಕೂದಲಿಗೆ ಬಹಳ ಉಪಯೋಗ ಮತ್ತು ರುಚಿಕರ ಆಹಾರ ತಯಾರಿಕೆಯಲ್ಲಿ ಬಳಸುತ್ತಾರೆ. ತೆಂಗಿನ ನೀರು ಬಾಯಾರಿಕೆ ತಣಿಸುತ್ತದೆ. ಚಿಪ್ಪಿನಿಂದ ಹಿಡಿದು ಹೊಟ್ಟೆಯವರಿಗೆ ಎಲ್ಲವೂ ತನ್ನದೇ ಆದ ಉಪಯುಕ್ತ ಗುಣ ಹೊಂದಿದೆ. ತೆಂಗಿನ ಎಣ್ಣೆ ಬರ್ಫಿ, ಮೇಣದ ಬತ್ತಿಗಳು, ಸಕ್ಕರೆ ಚಿಪ್ಸ್ ಮುಂತಾದವುಗಳಲ್ಲಿ ಬಳಸುತ್ತಾರೆ.

ಹೃದಯ, ಕರುಳು, ಚರ್ಮ ಆರೋಗ್ಯಕ್ಕೆ ತೆಂಗಿನ ಕಾಯಿಯೇ ಮದ್ದು ಎನ್ನುತ್ತಾರೆ. ತೆಂಗಿನ ಕಾಯಿಯ ಮೇಲೆ ಮೂರು ಗುರುತುಗಳಿದ್ದು, ಇವು ಮುಕ್ಕಣ್ಣ ಶಿವನನ್ನು ಪ್ರತಿನಿಧಿಸುತ್ತದೆ. ಇದು ಶಿವನ ಪ್ರತಿರೂಪ.

ತೆಂಗಿನಕಾಯಿ ಸ್ವಾರ್ಥ ರಹಿತ ಸೇವೆಯನ್ನು ನೀಡುತ್ತದೆ. ಗರಿಯನ್ನು ಮನೆಯ ಮೇಲ್ಭಾಗದ ಚಾವಣಿಗೆ ಮತ್ತು ಚಾಪೆ ತಯಾರಿಸಲು. ಕೊಬ್ಬರಿಂದ ಎಣ್ಣೆ, ಸೋಪು, ತಿಂಡಿ ತಯಾರಿಕೆ, ನಾರನ್ನು ಪಾತ್ರೆ ತೊಳೆಯಲು ಉಪಯೋಗಿಸುತ್ತಾರೆ. ಕೊಬ್ಬರಿ ಮೆದುಳಿನ ಚೈತನ್ಯಕ್ಕೆ, ದೇಹದ ಕಾಂತಿಗೆ, ಚರ್ಮ ಪೋಷಣೆಗೆ, ಕೂದಲು ಅಭಿವೃದ್ಧಿಗೆ, ನೆನಪಿನ ಶಕ್ತಿಗೆ, ಹೃದ್ರೋಗ ಶಮನವಾಗಲು, ರೋಗ ನಿರೋಧಕ ಶಕ್ತಿ ವೃದ್ಧಿ, ಪಚನ ಕ್ರಿಯೆಗೆ ಎಳನೀರು ಚೈತನ್ಯದಾಯಕ ವಸ್ತುವಾಗಿದೆ.

ರೈತರ ದೃಷ್ಟಿ ಬದಲಾಗಬೇಕಾಗಿದ್ದು, ತೆಂಗಿನ ಉತ್ಪನ್ನಗಳನ್ನ ಬಳಸುವುದನ್ನು ಕಲಿಯಬೇಕಾಗಿದೆ. ತೆಂಗಿನ ಬೆಳೆ ಕಡಿಮೆಯಾಗಲು ರೋಗ ಮತ್ತು ಕೀಟಗಳ ಹಾವಳಿ, ಬೆಲೆಯ ಅಸ್ಥಿರತೆ, ಉಪ ಉತ್ಪನ್ನ ಮತ್ತು ಮೌಲ್ಯ ವರ್ಧನೆ ಕೊರತೆ, ಪೋಷಕಾಂಶಗಳ ಅಸಮರ್ಪಕ ನಿರ್ವಹಣೆ, ಕಾರ್ಮಿಕರ ಕೊರತೆ, ಉತ್ತಮ ಗುಣಮಟ್ಟದ ಸಸಿಗಳ ಅಲಭ್ಯತೆ ಮತ್ತು ಅಡಿಕೆಯ ಬೆಳೆಯ ವಿಸ್ತೀರ್ಣ ಹೆಚ್ಚಾಗಿರುವುದು ಕಾರಣವಾಗಿವೆ.

ಬೆಳೆಯ ಪುನರ್ ಚೇತನಕ್ಕೆ ಸರ್ಕಾರಗಳು ಅಗತ್ಯ ಯೋಜನೆಗಳನ್ನು ರೂಪಿಸಬೇಕಾಗಿದೆ. ತೋಟಗಾರಿಕೆ ಇಲಾಖೆಯಿಂದ ಗುಣಮಟ್ಟದ ಸಸಿಗಳ ಉತ್ಪಾದನೆ ಮತ್ತು ಮಾರಾಟ, ಮಣ್ಣು ಪರೀಕ್ಷೆಯ ಆಧಾರದಲ್ಲಿ ಪೋಷಕಾಂಶಗಳ ನಿರ್ವಹಣೆ, ಹನಿ ನೀರಾವರಿಗೆ ಪ್ರೋತ್ಸಾಹ ಮತ್ತು ತೆಂಗಿನ ಬೆಳೆಯಲ್ಲಿ ಮಿಶ್ರ ಬೆಳೆಗಳಿಗೆ ಉತ್ತೇಜನ, ರೈತ ಉತ್ಪಾದಕ ಕಂಪನಿಗಳ ಮೂಲಕ ಸಂಸ್ಕರಣೆ ಮತ್ತು ಮಾರುಕಟ್ಟೆಗೆ ಅವಕಾಶ, ತೆಂಗಿನ ಕಾಯಿ ಕೀಳುವ ತರಬೇತಿ ಹೆಚ್ಚಿಸುವುದು, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತೆಂಗಿನ ನಾರಿನ ಉತ್ಪನ್ನಗಳ ಕೈಗಾರಿಕೆಗಳ ಸ್ಥಾಪನೆ ಆಗಬೇಕು.

'ಇಂಗು, ತೆಂಗು ಇದ್ದರೆ ಮಂಗ ಕೂಡ ಅಡುಗೆ ಮಾಡುತ್ತೆ' ಅನ್ನುವ ಗಾದೆ ಮಾತು ಕೂಡ ರೂಢಿಯಲ್ಲಿದೆ.

**- ಕುಂದೂರು ಮಂಜಪ್ಪ**
ಹೊಳೆಸಿರಿಗೆರೆ, ಹರಿಹರ ತಾಲ್ಲೂಕು

## ಮಕ್ಕಳಲ್ಲಿನ ಪ್ರತಿಭೆ ಗುರುತಿಸುವ ಕಾರ್ಯ ಶಿಕ್ಷಕರಿಂದಾಗಲಿ : ವಿಜಯ್



ದಾವಣಗೆರೆ, ಸೆ.1- ಮಕ್ಕಳಲ್ಲಿನ ಆಂತರಿಕ ಪ್ರತಿಭೆ ಗುರುತಿಸುವ ಕಾರ್ಯ ಶಿಕ್ಷಕರಿಂದಾಗಲಿ ಎಂದು ರಾಮಕೃಷ್ಣ ಇಂಟರ್ ನ್ಯಾಷನಲ್ ಶಾಲೆಯ ಕಾರ್ಯದರ್ಶಿ ವಿಜಯ ಕುಮಾರ್ ತಿಳಿಸಿದರು.

ಇಲ್ಲಿನ ಚಿಂತಾಮಣಿ ನಗರದಲ್ಲಿನ ರಾಮಕೃಷ್ಣ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಶುಕ್ರವಾರ ಆಯೋಜಿಸಿದ್ದ ರಾಜನಹಳ್ಳಿ ಕ್ಲಸ್ಟರ್ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹರಿಹರದ ಇಸಿಓ ಹರೀಶ್, ಬಿಆರ್‌ಪಿ ವೀರಪ್ಪ, ಕೊಕ್ಕನೂರಿನ ಸಿಆರ್‌ಪಿ ಕೆ.ಎನ್. ಬಸವರಾಜಯ್ಯ, ಎನ್‌ಪಿಎಸ್ ಕಾರ್ಯದರ್ಶಿ ಸಿದ್ದಪ್ಪ ಸಂಗಣ್ಣ, ರಾಜನಹಳ್ಳಿ ಸಿಆರ್‌ಪಿ ಕಟ್ಟೆ ಚನ್ನಕೇಶವ ಶ್ರೀಧರ, ಶಾಲಾ ಮುಖ್ಯ ಶಿಕ್ಷಕ ಉದಯ್ ಕುಮಾರ್ ಮತ್ತು ಇತರರು ಇದ್ದರು.

## ಥ್ರೋ ಬಾಲ್: ತಿಪ್ಪೇರುದ್ರ ಶಾಲೆ ಪ್ರಥಮ



ಹರಿಹರ

ಹರಿಹರ, ಸೆ.1- ಇಲ್ಲಿನ ಕಾಳಿದಾಸ ನಗರದ ಶ್ರೀ ಗುರು ತಿಪ್ಪೇರುದ್ರ ಸ್ವಾಮಿ ಪ್ರೌಢ ಶಾಲೆಯ ಮಕ್ಕಳು ಈಚೆಗೆ ನಡೆದ ವಲಯ ಮಟ್ಟದ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡಿದ್ದಾರೆ.

ಬಾಲಕಿಯರ ಥ್ರೋ ಬಾಲ್ ತಂಡವು ಪ್ರಥಮ ಸ್ಥಾನ ಮತ್ತು ಎತ್ತರ ಜಿಗಿತ ಸ್ಪರ್ಧೆಯಲ್ಲಿ ಉಷ್ಣಾ ಬಾನು ಪ್ರಥಮ ಸ್ಥಾನ ಪಡೆದು ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕರ ಥ್ರೋ ಬಾಲ್ ತಂಡವು ಉತ್ತಮ ಪ್ರದರ್ಶನದೊಂದಿಗೆ ದ್ವಿತೀಯ ಸ್ಥಾನ ಪಡೆದಿದೆ. ಮಕ್ಕಳ ಈ ಸಾಧನೆಗೆ ಮುಖ್ಯ ಶಿಕ್ಷಕ ರೇವಣನಾಯ್ಕ, ನಿವೃತ್ತ ದೈಹಿಕ ಶಿಕ್ಷಕ ಆರ್.ಜಿ. ಮಂಜುನಾಥ್ ಅಭಿನಂದಿಸಿದ್ದಾರೆ.

## ಮಾತು ಮೂರ್ಖತನದ ಪರಮಾವಧಿ

**(1ನೇ ಪುಟದಿಂದ)** ಪ್ರಕಾರ ಶಿಕ್ಷೆ ಆಗಲಿ ಎಂದರು.

ಆದರೆ, ಕಾಂಗ್ರೆಸ್‌ನವರು ತಮ್ಮ ಹುಳುಕುಗಳನ್ನು ಮುಚ್ಚಿಕೊಳ್ಳಲು ಅವರಿವರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಅಭಿವೃದ್ಧಿ ಶೂನ್ಯ ಸರ್ಕಾರವಾಗಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಕಿಡಿ ಕಾರಿದ್ದಾರೆ.

ಸರ್ಕಾರ ಕೆಡವಲು ಬಿಜೆಪಿ - ಜೆಡಿಎಸ್ ಹುನ್ನಾರ ಮಾಡುತ್ತಿವೆ ಎಂಬ ಆರೋಪ ತಳ್ಳಿ ಹಾಕಿದ ಬಿ.ಸಿ. ಪಾಟೀಲ್, ಇಂತಹ ಆರೋಪ ಮೂರ್ಖತನದ ಪರಮಾವಧಿ. ಯಾರಾದರೂ 136 ಸ್ಥಾನ ಇರುವ ಸರ್ಕಾರ ಕೆಡವಲು ಸಾಧ್ಯವೇ? ಎಂದು ಕೇಳಿದರು.

ಸುಮ್ಮನೆ ಬಾಯಿಗೆ ಬಂದಂತೆ ಹೇಳಿಕೆ ನೀಡುತ್ತಿದ್ದಾರೆ. ಕಾಂಗ್ರೆಸ್ ಶಾಸಕರು ತಮ್ಮ ಬೆಲೆಯನ್ನು ತಾವು ಕಟ್ಟಿಕೊಳ್ಳುವಂತೆ ಮಾತನಾಡುತ್ತಿದ್ದಾರೆ. ಈಗ ಬಿಜೆಪಿ ಸರ್ಕಾರ ರಚನೆ ಮಾಡಬೇಕು ಎಂದರೆ 90 ಶಾಸಕರು ಹೊರ ಬರಬೇಕು. ಅದು ಸಾಧ್ಯವಿಲ್ಲ ಎಂದರು.

ಈಗ ಸರ್ಕಾರ ವಿಫಲವಾಗಿದೆ, ಜನರು ಅಭಿವೃದ್ಧಿ ಬಗ್ಗೆ ಕೇಳುತ್ತಿದ್ದಾರೆ. ಜನರ ಗಮನ ಬೇರೆಡೆ ಸೆಳೆಯಲು ವಾರಕ್ಕೊಂದು ಕಾರಣ ಹೇಳಿಕೊಂಡು ಹೋಗುತ್ತಿದ್ದಾರೆ ಎಂದು ಪಾಟೀಲ್ ಹೇಳಿದರು.

## ಪಂಚಮಸಾಲಿ ರಾಜ್ಯಾಧ್ಯಕ್ಷರಾಗಿ ಸೋಮನಗೌಡ ಪಾಟೀಲ್

**(1ನೇ ಪುಟದಿಂದ)** ಪಂಚಮಸಾಲಿ ಗುರುಪೀಠದ ಧರ್ಮದರ್ಶಿ ಬಿ. ಸಿ. ಉಮಾಪತಿ ಮಾತನಾಡಿ, ಪಂಚಮಸಾಲಿ ಸಮಾಜದ ರಾಜ್ಯ ಘಟಕದ ನೂತನ ಪದಾಧಿಕಾರಿಗಳ ಅಧಿಕಾರ ಪದಗ್ರಹಣ ಸಮಾರಂಭವನ್ನು ಅಕ್ಟೋಬರ್ 6 ರಂದು ನಡೆಸಲಾಗುವುದು ಎಂದು ತಿಳಿಸಿದರು.

ದಾಸೋಹ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್, ದಾಸೋಹಕ್ಕೆ ಠೇವಣಿ ಖಾತೆ ತೆರದು 5 ಕೋಟಿ ರೂ. ಠೇವಣಿ ಇರಿಸುವ ಗುರಿ ಹೊಂದಲಾಗಿದೆ. ಈಗಾಗಲೇ 1.5 ಕೋಟಿ ರೂ. ಸಂಗ್ರಹವಾಗಿದೆ ಎಂದರು.

ರಾಜ್ಯಾಧ್ಯಕ್ಷರಾಗಿದ್ದ ಜಿ.ಪಿ. ಪಾಟೀಲ್ ರಾಜಿನಾಮೆ ನೀಡಿರುವುದ ರಂದ ಬರುವ ಅಕ್ಟೋಬರ್ 6 ರವರೆಗೆ ಹಂಗಾಮಿ ಅಧ್ಯಕ್ಷರಾಗಿ ಹೊನ್ನಾಳಿ ಪಟ್ಟಣಶೆಟ್ಟಿ ಅಧಿಕಾರವನ್ನು ಹೊಂದಿರು ತ್ತಾರೆ ಎಂದು ಪೀಠದ ಆಡಳಿತ ಅಧಿಕಾರಿ ಡಾ ರಾಜಕುಮಾರ್ ಹೇಳಿದರು.

ಸಮಾಜದ ಮಾಜಿ ಅಧ್ಯಕ್ಷ ಬಸವ ರಾಜ್ ದಿಂಡೂರು, ಧರ್ಮದರ್ಶಿಗಳಾದ ಚಂದ್ರಶೇಖರ್ ಪೂಜಾರ್, ಪಿ.ಡಿ. ಶಿರೂರು, ದಾವಣಗೆರೆ ರಶ್ಮಿ ನಾಗರಾಜ್ ಕುಂಕೋದ್, ವಸಂತ ಉಲ್ಲತ್ತಿ ರಾಣೆಬೆನ್ನೂರು, ಎನ್.ಆರ್. ರಾಜೇಶ್ವರಯ್ಯ, ಮಹೇಶ್ ಪಾಟೀಲ್, ಕಿರಣ್ ಪಾಟೀಲ್, ಸವಿತಾ ಮಹೇಶ್ ಕೆ,ಶಿವಕುಮಾರ್ ಬಳಿಗಾರ, ಸಿದ್ದೇಶ್ ಶಿವಮೊಗ್ಗ, ಷಣ್ಮುಖಪ್ಪ ಚಿತ್ರದುರ್ಗ, ಸಿ.ಸಿ. ಕರಡಿಶೆಟ್ಟರ್ ವಕೀಲರು ಲಿಂಗ ಸೂರು, ಬಸವರಾಜ್, ಶಂಕರ್ ಹಾವೇರಿ, ರೇಣುಕಾ, ದೊಡ್ಡಪ್ಪ ಕುಂದಗೋಳ ಕುಷ್ಟೆ ಕೊಪ್ಪಳ , ಮಠದ ಬಂಕಾಪುರ ಶಿವಣ್ಣ, ಅಶೋಕ ಬೆಂಡಿಗೇರಿ, ಮಲ್ಲಿಕಾರ್ಜುನ ಇತರರು ಹಾಜರಿದ್ದರು.

## ಆಗಸ್ಟ್‌ನಲ್ಲಿ ಜಿಎಸ್‌ಟಿ ಸಂಗ್ರಹ 1.75 ಲಕ್ಷ ಕೋಟಿ ರೂ.

**(1ನೇ ಪುಟದಿಂದ)** ಹೆಚ್ಚಾಗಿದೆ. ಅಮದು ಮೂಲಕ ದೊರೆಯುವ ಆದಾಯ ಶೇ. 12.1 ರಷ್ಟು ಹೆಚ್ಚಾಗಿದೆ. ಜುಲೈ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹ 1.82 ಲಕ್ಷ ಕೋಟಿ ರೂ. ಆಗಿತ್ತು. ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ 1.59 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು.

## ನಗರದಲ್ಲಿ ವಲಯ ಮಟ್ಟದ ಕಬಡ್ಡಿ ಪಂದ್ಯಾವಳಿ ಹುಬ್ಬಳ್ಳಿ ವಿಘ್ನೇಶ್ವರ ತಂಡಕ್ಕೆ ಪ್ರಥಮ ಸ್ಥಾನ



ದಾವಣಗೆರೆ,ಸೆ.1- ನಗರದ ಜಿ.ಎಂ ಫಾರ್ಮಸಿ ಕಾಲೇಜ್ ಆವರಣದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ವತಿಯಿಂದ ವಲಯ ಮಟ್ಟದ ಕಬಡ್ಡಿ ಪಂದ್ಯಾವಳಿ ನಡೆಯಿತು.

ಉಮೇಶ್ ನಾಯಕತ್ವದ ಹುಬ್ಬಳ್ಳಿ ವಿಘ್ನೇಶ್ವರ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ತಂಡ ಮೊದಲ ಸ್ಥಾನ ಪಡೆಯಿತು. ಸುದೀಪ್ ನಾಯಕತ್ವದ ಹರಪನಹಳ್ಳಿ ಎಸ್.ಸಿ.ಎಸ್ ಕಾಲೇಜ್ ಆಫ್ ಫಾರ್ಮಸಿ ತಂಡ ದ್ವಿತೀಯ ಹಾಗೂ ಸುರೇಶ್ ನಾಯಕತ್ವದ ಚಳ್ಳಕೆರೆ ಬಾಪೂಜಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ತಂಡ ತೃತೀಯ ಸ್ಥಾನ ಪಡೆದವು.

ಅಭಿಷೇಕ್ ನಾಯಕತ್ವದ ಜಿ.ಎಂ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯೂಟಿಕಲ್ ಸೈನ್ಸ್ ಅಂಡ್ ರಿಸರ್ಚ್ ತಂಡ ನಾಲ್ಕನೇ ಸ್ಥಾನ ಪಡೆಯಿತು. ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಜಿ.ಎಂ ವಿವಿಯ ಉಪ ಕುಲಪತಿ ಡಾ. ಎಚ್.ಡಿ ಮಹೇಶಪ್ಪ, ರಿಜಿಸ್ಟ್ರಾರ್ ಡಾ. ಸುನಿಲ್ ಕುಮಾರ್, ಜಿ.ಎಂ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಗಿರೀಶ್ ಬೋಳಕಟ್ಟಿ, ಕ್ರೀಡಾ ವಿಭಾಗದ ಮುಖ್ಯಸ್ಥ ಮೊಹಮ್ಮದ್ ಯೂಸೂಫ್, ಧಮನಿ ಹಾಗೂ ಯಶವಂತ ಎ.ಎಂ ಮತ್ತಿತರರು ಭಾಗವಹಿಸಿದ್ದರು.

## ನಾಟಕ ಅಕಾಡೆಮಿ ಅಧ್ಯಕ್ಷರಿಗೆ ಸನ್ಮಾನ



ದಾವಣಗೆರೆ, ಸೆ.1- ರಂಗಕರ್ಮಿ ಎನ್.ಎಸ್. ರಾಜು, ಜಾನಪದ ಕಲಾವಿದ ಬಿ. ಹನುಮಂತಾಚಾರಿ ಅವರು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅವರನ್ನು ಭೇಟಿ ಮಾಡಿ ಕಲಾವಿದರ ಕುಂದು-ಕೊರತೆಗಳ ಬಗ್ಗೆ ಚರ್ಚಿಸಿದರು. ನಂತರ ಅಕಾಡೆಮಿಯ ಕಾರ್ಯಾಲಯದಲ್ಲಿ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅವರನ್ನು ಸನ್ಮಾನಿಸಲಾಯಿತು.



## ಹೊನ್ನಾಳಿ : ಶ್ರೀ ಚನ್ನಪ್ಪಸ್ವಾಮಿ ರಥೋತ್ಸವ

ಹೊನ್ನಾಳಿ, ಸೆ. 1- ಚನ್ನಪ್ಪಸ್ವಾಮಿ ವಿದ್ಯಾಪೀಠದ ಅಡಿಯಲ್ಲಿ ನಡೆಯುತ್ತಿರುವ ಸಂಸ್ಥೆಯ ವಿದ್ಯಾರ್ಥಿಗಳಿಂದ ಭರತ ನಾಟ್ಯ, ನೃತ್ಯ ಸೇರಿದಂತೆ ಇತರೆಡೆಯಿಂದ ಬಂದಿದ್ದ ಕಲಾವಿದರ ತಂಡದವರಿಂದ ಡೊಳ್ಳು ಕುಣಿತ, ಕೀಲು ಕುದುರೆ, ನಂದಿ ಕುಣಿತದ ನಡುವೆ ಹಿರೇಕಲ್ಮಠದ ಶ್ರೀ ಚನ್ನಪ್ಪಸ್ವಾಮಿ ರಥೋತ್ಸವವು ನಿನ್ನೆ ವಿಜೃಂಭಣೆಯಿಂದ ಜರುಗಿತು.

ಬೆಳಿಗ್ಗೆ ಶ್ರೀ ಮಠದ ಮುಂಭಾಗದಲ್ಲಿ ವೀರಭದ್ರೇಶ್ವರ ಕೆಂಡದಾರ್ಚನೆ ಮತ್ತು ವೀರಗಾಸೆ ಕಾರ್ಯಕ್ರಮ ನಡೆಯಿತು. ಹರಕೆ ಹೊತ್ತಿದ್ದ ಭಕ್ತರು ಕೆಂಡವನ್ನು ತುಳಿದು, ತಮ್ಮ ಇಷ್ಟಾರ್ಥಗಳನ್ನು ಪೂರೈಸುವಂತೆ ಬೇಡಿಕೊಂಡರು.

ನಂತರ ಹಿರೇಕಲ್ಮಠದ ಪೀಠಾಧ್ಯಕ್ಷರಾದ ಒಡೆಯರ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ರಥವನ್ನೇರುತ್ತಿದ್ದಂತೆಯೇ ನೆರೆದಿದ್ದ ಭಕ್ತರು ಶ್ರೀ ಚನ್ನಪ್ಪ ಸ್ವಾಮೀಜಿಗೆ ಜಯಘೋಷದೊಂದಿಗೆ ರಥವನ್ನು ಹಿರೇಕಲ್ಮಠದ ದ್ವಾರಬಾಗಿಲಿನಿಂದ ಪಟ್ಟಣದ ವೀರಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಎಳೆದು ತಮ್ಮ ಭಕ್ತಿ ಸೇವೆಯನ್ನು ಅರ್ಪಿಸಿದರು.

## ರಾಮಕೃಷ್ಣ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ



ದಾವಣಗೆರೆ, ಸೆ. 1 - ನಗರದ ಡಿ.ಸಿ.ಎಂ. ಟೌನ್‌ಶಿಪ್‌ನ ಶ್ರೀ ರಾಮಕೃಷ್ಣ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ವಿದ್ಯಾರ್ಥಿಗಳು ಕೃಷ್ಣ ಹಾಗೂ ರಾಧೆಯ ವೇಷಗಳನ್ನು ಧರಿಸಿ, ವಿವಿಧ ರೀತಿಯ ನಡಿಗೆ ಹಾಗೂ ಸಮೂಹ ನೃತ್ಯಗಳನ್ನು ಪ್ರದರ್ಶಿಸುವ ಮೂಲಕ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಿದರು.

ಶಾಲೆಯ ಗೌರವ ಕಾರ್ಯದರ್ಶಿ ಹಾಗೂ ಮುಖ್ಯೋಪಾಧ್ಯಾಯ ವಿಜಯಕುಮಾರ್, ಶಿಕ್ಷಕಿಯರಾದ ಶೋಭಾ ಹುಲ್ಲುಮನಿ, ಕಾವ್ಯ, ಆಶಾ, ಮಹಾಲಕ್ಷ್ಮಿ, ಅನಿತಾ, ಕರಿಬಸಮ್ಮ, ಶ್ರೀದೇವಿ, ತನುಶ್ರೀ ಸೇರಿದಂತೆ, ಇತರರು ಭಾಗವಹಿಸಿದ್ದರು.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ ದಕ್ಷಿಣ 40×60 (60 ಲಕ್ಷ) 50x80 ಪಶ್ಚಿಮ ರೂ. 2550/- ಅಡಿಗೆ 40x60 ವೆಸ್ಟ್ (62 ಲಕ್ಷ) 40x60 ಸೌತ್ (61 ಲಕ್ಷ) 40 ಅಡಿ ರಸ್ತೆಗೆ
ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409
120 ಅಡಿ ರಸ್ತೆ, ಕಮರ್ಷಿಯಲ್ 40x60 ಉತ್ತರ (93 ಲಕ್ಷ), 30x60 (65 ಲಕ್ಷ)

**MCC 'B' BLOCK ನಲ್ಲಿ ಮನೆ ಮಾರಾಟಕ್ಕೆ**
60x40 ಕಾರ್ನರ್, 40x60 ಪೂರ್ವ, 40x60 ಪಶ್ಚಿಮ, 22x60 ಪೂರ್ವ
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
ಬಾಡಾ ಕ್ರಾಸ್ ಪೊಲೀಸ್ ಲೇಔಟ್‌ನಲ್ಲಿ 30x40 ಪೂರ್ವ, 30x40 ಸೌತ್

**WANTED**
Computer Operator
Exel, Power Point ಹಾಗೂ Tele Calling ಅನುಭವವಿರುವ ಮಹಿಳಾ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ವಿದ್ಯಾರ್ಹತೆ : ಪದವಿ.
Contact : 80882 10419

**ಬೇಕಾಗಿದ್ದಾರೆ**
ದಾವಣಗೆರೆ ಹಾಗೂ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ESI, PF ಜೊತೆಗೆ ಆಕರ್ಷಕ ವೇತನ ಕೊಡಲಾಗುವುದು. ಇಚ್ಛೆಯುಳ್ಳವರು ಸಂಪರ್ಕಿಸಿ :
63622 58330, 80730 25135

**WANTED**
Female Nurses to Work at Anugraha Hospital. MCC `B' Block. Davanagere. Good Salary. Contact:
80735 15690

**ROBOTIC CLASSES**
Age group : 8 years & above
Bruit Academy
M : 97390 66956

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ತಕ್ಷಣ ಬೇಕಾಗಿದ್ದಾರೆ**
ಬಾಪೂಜಿ ಆಸ್ಪತ್ರೆಯಲ್ಲಿ 08 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ವೇತನ 5,500/-ಇರುತ್ತದೆ ಹಾಗೂ ದಾವಣಗೆರೆಯ ಸುತ್ತಮುತ್ತಲಿನಲ್ಲಿ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ.
9060545500, 9739089022

**REQUIRED**
Experienced, Accountant having Tally and GST knowledge are required to work in Office.
REDDY ASSOCIATIES
# 82/19,P B Road, Beside Wellness Stores, Opp: Renuka Manidar, Davangere.
99000 22030

**ಬೇಕಾಗಿದ್ದಾರೆ**
ಕಂಪ್ಯೂಟರ್ ಜ್ಞಾನವುಳ್ಳ, ಕ್ಯಾಡ್ ಮತ್ತು ಲೇಔಟ್ ಪ್ಲಾನ್ ಮಾಡುವಂತಹ ಅನುಭವವಿರುವ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ : 99640-05604 76766-96963

**WANTED**
S.V.MARKETING DAVANGERE
* Marketing Executive
* Accountant
* godown Incharge
63620 23451, 97434 37003

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮಾರಾಟಕ್ಕಿದೆ**
ಉತ್ತಮ ಸಂಪಾದನೆಯುಳ್ಳ T - BENCH FRANCHISE ಎಲ್ಲಾ ಐಟಂನೊಂದಿಗೆ ಮಾರಾಟಕ್ಕಿದೆ.
ಕೂಡಲೇ ಸಂಪರ್ಕಿಸಿ:
ಎಸ್ ಎಸ್ ಹೈಟೆಕ್ ಹಾಸ್ಪಿಟಲ್ ರೋಡ್ ಜಯನಗರ, ದಾವಣಗೆರೆ.
85272 86950

**ಸೈಟು ಮಾರಾಟಕ್ಕಿದೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ ಫೈನಲ್ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ. 40x45 ಪೂರ್ವ- ಉತ್ತರ ಕಾರ್ನರ್ ಸೈಟು. ದರ 2,350/- ಬ್ಯಾಂಕ್ ಲೋನ್ ಆಗುತ್ತದೆ.
ಮೊ : 9740258276

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ 6:30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**KAIDB**
Furniture Factory for Rent, Davanagere. 4000 Sqft.
98459 77475

**WANTED**
PUC or Degree Pass or Fail Computer Knowledge is must
EXCELLENT ELECTRONICS
# 2137/1, 4th Main, 3rd Cross, MCC `A' Block, Davangere - 577 002.
Contact No.
98865 15100

**ಮನೆಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಉತ್ತರ 30x40 (ಮೇಲೆ-ಕೆಳಗೆ), SS 'A' Block ಪೂರ್ವ, 30x40 (ಡೂಪ್ಲೆಕ್ಸ್), SS 'B' Block ಪೂರ್ವ 50x33, ದಕ್ಷಿಣ 30x40 (ಡೂಪ್ಲೆಕ್ಸ್), ಮಹಾಲಕ್ಷ್ಮಿ ಲೇ ಔಟ್ ಉತ್ತರ 30x50 (ಡೂಪ್ಲೆಕ್ಸ್)
ಐಗೂರು ವಿಜಯಕುಮಾರ್
99457 02495

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿನಾಂಕ 4.9.2024ರ ಬುಧವಾರ ದಿನಾಂಕ 5.9.2024ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬಾಡಿಗೆಗೆ ಇದೆ**
BIET ಕಾಲೇಜು ಹತ್ತಿರ (ಮೋರ್ ಸೂಪರ್ ಮಾರ್ಕೆಟ್ ಪಕ್ಕ) ಹೋಟೆಲ್ ನಡೆಸಲು ಸೂಕ್ತವಾದ ಕಟ್ಟಡ ಹಾಗೂ 1ನೇ ಮಹಡಿಯಲ್ಲಿ ಆಫೀಸ್ ಸ್ಪೇಸ್ ಬಾಡಿಗೆಗೆ ಇರುತ್ತದೆ.
88618 41515

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ಚನ್ನಗಿರಿ, ಹೊಳಲ್ಕೆರೆ, ಹೊನ್ನಾಳಿ, ಹೊಸದುರ್ಗ, ಚಿತ್ರದುರ್ಗ, ಚಳಕೇರಿ, ಹಿರಿಯೂರು ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ಐ.ಟಿ.ಐ. ಮತ್ತು ಡಿಪ್ಲೋಮಾ ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರುವವರು ತಕ್ಷಣವೇ ಬೇಕಾಗಿದ್ದಾರೆ.
ಮೊ.: 9738735156, 9886515100

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x40 (ಅಕ್ಕ-ಪಕ್ಕ), ಹೊಸ ಬನಶಂಕರಿ ಪೂರ್ವ 30x50, 40x60 (ಅಕ್ಕ-ಪಕ್ಕ), ಪೂರ್ವ 30x57 (ಅಕ್ಕ-ಪಕ್ಕ), ಡಾಲರ್ಸ್ ಕಾಲೋನಿ, ದಕ್ಷಿಣ 30x57, ಮಹಾಲಕ್ಷ್ಮಿ ಲೇ ಔಟ್ ಪಶ್ಚಿಮ 30x50 (ಕಾವೇರಿ ಅಪಾರ್ಟ್‌ಮೆಂಟ್)
ಐಗೂರು ವಿಜಯಕುಮಾರ್
99457 02495

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಡ್ರೈವರ್ ಬೇಕಾಗಿದ್ದಾರೆ**
ಅಶೋಕ ಲೈಲ್ಯಾಂಡ್ ದೋಸ್ತ್ ಗಾಡಿಗೆ ಮತ್ತು ಕಾರು ಓಡಿಸಲು ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
ಮೊ. : 70190 51306

ಜನ ಆಶಾ ಸೌತ್ ನಿಧಿ ಲಿಮಿಟೆಡ್
**ಪಿಗ್ಮಿ ಏಜೆಂಟರು ಬೇಕಾಗಿದ್ದಾರೆ**
RBI Approved
ಜನ ಆಶಾ ಸ್ಮಾರ್ಟ್ ಬ್ಯಾಂಕ್ H.O. ಮೈಸೂರು ದಾವಣಗೆರೆ ಶಾಖೆಯಲ್ಲಿ ನಗರ ವಲಯದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Salary, Incentive & PF, Health Insurance ಸೌಲಭ್ಯವಿರುತ್ತದೆ
99720 42558, 96864 12409

**ಪುರುಷ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ**
ಕಛೇರಿಯಲ್ಲಿ ಕೆಲಸ ನಿರ್ವಹಿಸಲು ಕಂಪ್ಯೂಟರ್‌ನಲ್ಲಿ ಎಂ.ಎಸ್.ಆಫೀಸ್ ಹಾಗೂ ಪೋಟೋಶಾಪ್‌ನಲ್ಲಿ ಅನುಭವವುಳ್ಳ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿರಿ:
ಶ್ರೀ ರೇಣುಕಾದೇವಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ (ರಿ)
ಹೆಚ್.ಡಿ.ಎಫ್.ಸಿ. ಬ್ಯಾಂಕ್ ಪಕ್ಕ, 2ನೇ ಮಹಡಿ, ಹೆಚ್.ಎಂ. ರಸ್ತೆ, ದಾವಣಗೆರೆ 577001
ಮೊಬೈಲ್ ನಂ: 94483 38657

**ಶ್ರೀ ಮಾರಿಕಾಂಬಾ ಫೈರ್‌ವುಡ್, ಸ್ಪ್ಲಿಟಿಂಗ್ ಸರ್ವೀಸ್**
ದಾವಣಗೆರೆ-ಹರಿಹರ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಮನೆ, ದೇವಸ್ಥಾನ, ಮಠ ಮತ್ತು ಕಾರ್ಖಾನೆಗಳಲ್ಲಿ ವಿವಿಧ ಅವಶ್ಯಕತೆಗಳಿಗಾಗಿ ಬಳಸುವ ಉರುವಲು ಸೌದೆ ಸೀಳುವ ಕೆಲಸವನ್ನು ತಮ್ಮ ಜಾಗಕ್ಕೆ ಬಂದು ಸೀಳಿ ಕೊಡಲಾಗುವುದು. ಸಂಪರ್ಕಿಸಿ :
87226 78999

# ಅಂಗವಿಕಲ ಆಶಾಕಿರಣ ಟ್ರಸ್ಟ್ ಶಾಲೆಯಲ್ಲಿ ಸಾಂಸ್ಕೃತಿಕ, ನಗೆ ಕಾರ್ಯಕ್ರಮ



ದಾವಣಗೆರೆ, ಸೆ.. 1- ನಗರದ ಎಸ್.ಎಸ್. ಬಡಾವಣೆಯಲ್ಲಿನ ಅಂಗವಿಕಲ ಆಶಾಕಿರಣ ಟ್ರಸ್ಟ್‌ನ ಶಾಲೆಯಲ್ಲಿ ಈಚೆಗೆ ಸಾಂಸ್ಕೃತಿಕ ಮತ್ತು ನಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೂಲತಃ ಕೇರಳ ರಾಜ್ಯದ ಕೊಟ್ಟಾಯಂನಿಂದ ಆಗಮಿಸಿದ್ದ ಕಲಾವಿದರಾದ ಎಲ್. ಶ್ರೀನಿವಾಸ್ ಪತ್ನಿ ಸರಸ್ವತಿ, ಮಗಳಾದ ಗಾಯಕಿ ಮಾನಸ ಅವರು ಕಾರ್ಯಕ್ರಮ ನಡೆಸಿಕೊಟ್ಟರು.

ಬ್ಯಾಂಕ್‌ನ ನಿವೃತ್ತ ಉದ್ಯೋಗಿ ರಾಮಚಂದ್ರ ಶೆಟ್ಟಿ ಅವರು ನಗೆ ಕಾರ್ಯಕ್ರಮ ನಡೆಸಿಕೊಟ್ಟರು.

ಅಂಗವಿಕಲರ ಆಶಾಕಿರಣ ಟ್ರಸ್ಟ್ ನ ಅಧ್ಯಕ್ಷ ರಮಣಲಾಲ್ ಪಿ. ಸಂಘವಿ, ಕಾರ್ಯದರ್ಶಿ ಪೋಪಟ್ ಲಾಲ್ ಜೈನ್, ಸಮಾಜ ಸೇವಕ ಗಣಪತಿ ಕಾಗಲ್ಕರ್, ನಿವೃತ್ತ ಪೊಲೀಸ್ ಅಧಿಕಾರಿ ಟಿ.ಎಸ್. ಮುರುಗಣ್ಣನವರ್, ಹಿರಿಯ ಪತ್ರಕರ್ತ ಪಿ. ಮಂಜುನಾಥ ಕಾಡಜ್ಜಿ, ಪಾಲಿಫೈಬರ್ ನಿವೃತ್ತ ನೌಕರ ಸಿರಾಜ್ ಮಹನೊತ್ ಮತ್ತಿತರರು ಪಾಲ್ಗೊಂಡಿದ್ದರು.

## ಹಾಡಿಗೆ ಕುಣಿದು ಕುಪ್ಪಳಿಸಿದ ಮಕ್ಕಳು



ಈ ಮಕ್ಕಳು ಬುದ್ಧಿಮಾಂದ್ಯರು, ಅಂಗವಿಕಲರು. ಇವರಿಗೆ ಪ್ರಪಂಚದ ಅರಿವಿಲ್ಲ. ಆದರೆ, ಇವರಲ್ಲೂ ವಿಶೇಷವಾದ ಪ್ರತಿಭೆ ಇರುತ್ತದೆ ಎಂಬುದನ್ನು ಸಾಬೀತು ಮಾಡಿದರು. ಹಿಂದಿ ಸಿನಿಮಾ ಹಾಡಿಗೆ ಕುಣಿದು ಕುಪ್ಪಳಿಸಿದರು ತಮ್ಮೆಲ್ಲ ನೋವು, ನಲಿವುಗಳನ್ನ ಮರೆತು ಗೊಳ್ಳನೆ ನಕ್ಕರು.

# ಒಂದು ಒಳ್ಳೆಯ ಪುಸ್ತಕ ನೂರು ಸ್ನೇಹಿತರ ಮೌಲ್ಯದ್ದು



ದಾವಣಗೆರೆ, ಸೆ.1- ವಕೀಲರ ಸಂಘದ ವತಿಯಿಂದ ವಕೀಲ ಕೆ. ದಾದಾಪೀರ್ ಬರೆದಿರುವ ಲಾಯರ್ಸ್ ರೆಡಿ ರೆಕ್‌ನರ್ ಪುಸ್ತಕ ಬಿಡುಗಡೆ ಸಮಾರಂಭವನ್ನು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿತ್ತು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್.ಹೆಗಡೆ ಪುಸ್ತಕ ಬಿಡುಗಡೆ ನೆರವೇರಿಸಿ ಮಾತನಾಡುತ್ತಾ, ಕಲಿಕೆಯು ನಿರಂತರ ಪ್ರಕ್ರಿಯೆಯಾಗಿದ್ದು, ನಮ್ಮ ಜೀವನದಲ್ಲಿ ಗುರಿಗಳನ್ನು ಸಾಧಿಸಲು ಪುಸ್ತಕಗಳು ಸರಿ ಹಾದಿಯಲ್ಲಿ ನಡೆಸುವುದರಿಂದ ಅವುಗಳಿಗೆ ಅಪಾರ ಪ್ರಾಮುಖ್ಯತೆ ಇದೆ ಎಂದು ಹೇಳಿದರು.

ಒಂದು ಒಳ್ಳೆಯ ಪುಸ್ತಕ ನೂರು ಸ್ನೇಹಿತರ ಮೌಲ್ಯದ್ದಾಗಿದೆ. ಪುಸ್ತಕಗಳ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತೇವೆ ಹಾಗೂ ಲೋಕದ ಅಂದವನ್ನು ಪಡೆಯಲು ಅವಕಾಶವಾಗುತ್ತದೆ. ಪ್ರಪಂಚದ ಬಗ್ಗೆ ಹೊಸ ಮಾಹಿತಿ, ನೆಲದ ಕಾನೂನುಗಳ ಬಗ್ಗೆ ತಿಳಿದುಕೊಳ್ಳಲು ಪುಸ್ತಕಗಳು ಸಹಾಯ ಮಾಡುತ್ತವೆ ಮತ್ತು ಜ್ಞಾನವನ್ನು ಪಡೆಯುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಮತ್ತು ವರ್ತಮಾನದ ಸಮಸ್ಯೆಗಳಿಗೆ ಸ್ಪಂದಿಸಲು ಸಹಕಾರಿಯಾಗುತ್ತವೆ ಎಂದು ಅಭಿಪ್ರಾಯಿಸಿದರು.

ಸಮಾರಂಭದಲ್ಲಿ ಮಾತನಾಡಿದ ಹಿರಿಯ ನ್ಯಾಯವಾದಿ ಲೇಖಕ ಕೆ. ದಾದಾಪೀರ್ ಮಾತನಾಡಿ, ಮೊಬೈಲ್‌ನಲ್ಲಿ ಗೂಗಲ್ ವಿಶ್ಲೇಷಣೆ ಬದಿಗಿಟ್ಟು, ಪುಸ್ತಕ ಓದುವ ಆನಂದ ಅನುಭವಿಸಿ, ಜ್ಞಾನ ಸಂಪನ್ನರಾಗ ಬೇಕೆಂದು ಯುವ ವಕೀಲರಿಗೆ ಸಲಹೆ ನೀಡಿದರು.

ಆಳ ಅಧ್ಯಯನದಿಂದ ವಾಸ್ತವಾಂಶಗಳನ್ನು ಸರಿಯಾಗಿ ಮತ್ತು ಸುಲಲಿತವಾಗಿ ನ್ಯಾಯಾಲಯದಲ್ಲಿ ಮಂಡಿಸಿ, ಮನದಟ್ಟು ಮಾಡಲು ಕಾನೂನು ಪುಸ್ತಕಗಳ ಅಭ್ಯಾಸ ನಿರಂತರವಾಗಿರಬೇಕೆಂದು ತಿಳಿಸಿದರು. ತಮ್ಮ ಪುಸ್ತಕದಲ್ಲಿ 20 ಕೇಂದ್ರದ ಅಧಿನಿಯಮಗಳು ಹಾಗೂ ಕರ್ನಾಟಕದ ಅಧಿನಿಯಮಗಳ ಪರಿಚಯವಿದ್ದು, 222 ಪುಟಗಳ ಈ ಪುಸ್ತಕವನ್ನು ಬೆಂಗಳೂರಿನ ಪ್ರೀಮಿಯರ್ ಬುಕ್ ಹೌಸ್ ಪ್ರಕಟಿಸಿದೆ ಎಂದು ತಿಳಿಸಿದರು.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ಅಭಿಮತ**

ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಪುಸ್ತಕಗಳನ್ನು ನಮ್ಮನ್ನು ಒಂಟಿತನದ ಪ್ರಪಂಚದಿಂದ ಹೊರತರುವ ಅತ್ಯುತ್ತಮ ಒಡನಾಡಿಗಳಾಗಿವೆ. ಪುಸ್ತಕ ರಚನೆ ಒಂದು ರಚನಾತ್ಮಕ ಕ್ರಿಯೆ, ಒಂದು ದೇಶದ ಇತಿಹಾಸ, ಪರಂಪರೆ, ಸಂಸ್ಕೃತಿ ಮತ್ತು ಜೀವನ ಮೌಲ್ಯವನ್ನು ತಿಳಿಯಲು ಪುಸ್ತಕಗಳು ಸಹಕಾರಿಯಾಗಿವೆ. ಪುಸ್ತಕಗಳಿಗೂ, ವಕೀಲರಿಗೂ ಅವಿನಾಭಾವ ಸಂಬಂಧವಿದ್ದು, ಅವಿಭಾಜ್ಯ ಅಂಗಗಳಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಲೇಖಕ ಕೆ.ದಾದಾಪೀರ್ ದಂಪತಿಯನ್ನು ಸಂಘದ ಪರವಾಗಿ ಸನ್ಮಾನಿಸಿ, ಗೌರವಿಸಲಾಯಿತು.

ಸಮಾರಂಭದ ವೇದಿಕೆಯಲ್ಲಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಆರ್.ಎನ್. ಪ್ರವೀಣ್‌ಕುಮಾರ್, ಮಕ್ಕಳ ಸ್ನೇಹಿ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶರಾದ ಶ್ರೀರಾಮ ನಾರಾಯಣ ಹೆಗಡೆ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಜೆಎಂ ಟಿ.ಎಂ.ನಿವೇದಿತಾ ಉಪಸ್ಥಿತರಿದ್ದರು.

ನ್ಯಾಯಾಲಯದ ಸಿಬ್ಬಂದಿ ಅನಿತಾ ವಿ.ಟಿ.ಯವರಿಂದ ಪ್ರಾರ್ಥಿಸಿದರು. ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್ ಸ್ವಾಗತಿಸಿದರು. ಕಾರ್ಯ ದರ್ಶಿ ಎಸ್.ಬಸವರಾಜ್ ನಿರೂಪಿಸಿದರು. ಸಹಕಾರ್ಯ ದರ್ಶಿ ಎ.ಎಸ್. ಮಂಜುನಾಥ್ ವಂದಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಆರ್. ಭಾಗ್ಯಲಕ್ಷ್ಮಿ, ಕೆ.ಎಂ.ನೀಲಕಂಠಯ್ಯ, ಜಿ.ಜೆ. ಸಂತೋಷ್ ಕುಮಾರ್, ಆರ್.ಚೌಡಪ್ಪ, ಎಲ್. ನಾಗರಾಜ್, ಟಿ.ಹೆಚ್. ಮಧುಸೂಧನ್, ಕೆ.ಎಂ. ರಾಘವೇಂದ್ರ ಉಪಸ್ಥಿತರಿದ್ದರು.

## ಭರವಸೆಗೆ ಸುಪ್ರೀಂ ಜಡ್ಜ್ ಆಕ್ಷೇಪ

**(1ನೇ ಪುಟದಿಂದ)** ಬಂಡವಾಳ ಮಾಡಿಕೊಳ್ಳಲು ಮುಂದಾಗುತ್ತಿದ್ದಾರೆ. ಕೆಲ ಘಟನಾ ಸ್ಥಳಗಳಿಗೆ ಭೇಟಿ ನೀಡುವ ರಾಜಕೀಯ ನಾಯಕರು, ದೋಷಿಗಳಿಗೆ ಮರಣದಂಡನೆ ವಿಧಿಸುವುದಾಗಿ ಭರವಸೆ ನೀಡುತ್ತಾರೆ. ಆದರೆ ಈ ರೀತಿಯ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇರುವುದು ನ್ಯಾಯಾಂಗಕ್ಕೆ ಮಾತ್ರ ಎಂದು ಹೇಳಿದರು.

ನ್ಯಾಯಮೂರ್ತಿ ಓಕಾ ಅವರು ಯಾವುದೇ ನಿರ್ದಿಷ್ಟ ಘಟನೆಯನ್ನು ಉಲ್ಲೇಖಿಸಲಿಲ್ಲ. ಆದರೆ ಕೋಲ್ಕತಾದಲ್ಲಿ ವೈದ್ಯೆ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆ ಮತ್ತು ಮಹಾರಾಷ್ಟ್ರದ ಬದ್ಲಾಪುರ ಶಾಲೆಯಲ್ಲಿ ಬಾಲಕಿಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣಗಳು ಇತ್ತೀಚೆಗೆ ಸಾಕಷ್ಟು ಆಕ್ರೋಶಕ್ಕೆ ಕಾರಣವಾಗಿವೆ.

ಅತ್ಯಾಚಾರ ಪ್ರಕರಣದಲ್ಲಿ ದೋಷಿಗಳಿಗೆ ಮರಣದಂಡನೆ ವಿಧಿಸಬೇಕು ಎಂದು ಕೇಂದ್ರ ಸಚಿವ ರಾಮದಾಸ್ ಅಥಾವಲೆ ಒತ್ತಾಯಿಸಿದ್ದರು. ಈಗಿರುವ ಕಾನೂನುಗಳಿಗೆ ತಿದ್ದುಪಡಿ ತಂದು ಅತ್ಯಾಚಾರಿಗಳಿಗೆ ಮರಣದಂಡನೆ ವಿಧಿಸಲಾಗುವುದು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದರು.

## ಪರಿಸರ ಸ್ನೇಹಿ ಗಣೇಶ ಪ್ರತಿಷ್ಠಾಪಿಸಿ ಹಬ್ಬ ಆಚರಿಸಲು ಜಿಲ್ಲಾಧಿಕಾರಿ ಸೂಚನೆ

ದಾವಣಗೆರೆ, ಸೆ.1- ರಾಜ್ಯದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣೇಶ ವಿಗ್ರಹಗಳ ಮಾರಾಟ, ಉತ್ಪಾದನೆ ಹಾಗೂ ವಿಸರ್ಜನೆ ನಿಷೇಧಿಸಲಾಗಿದ್ದು, ಸಾರ್ವಜನಿಕರು ಪರಿಸರ ಸ್ನೇಹಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಹಬ್ಬ ಆಚರಿಸಿ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಗೌರಿ ಗಣೇಶ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಬಣ್ಣ ರಹಿತ, ಮಣ್ಣಿನ ಅಥವಾ ಇತರೆ ಪರಿಸರ ಸ್ನೇಹಿ ಗಣೇಶ ಮೂರ್ತಿಗಳೊಂದಿಗೆ ಹಬ್ಬ ಆಚರಿಸಿ, ನಂತರ ಸ್ಥಳೀಯ ಸಂಸ್ಥೆಗಳು ನಿಗದಿಪಡಿಸಿದ ಸ್ಥಳಗಳಲ್ಲಿಯೇ ಮೂರ್ತಿಗಳನ್ನು ವಿಸರ್ಜಿಸಬೇಕು.

ಗಣೇಶ ಮೂರ್ತಿ ಪ್ರತಿಷ್ಠಾಪನಾ ಸಮಿತಿಯವರು ಉತ್ಸವಕ್ಕೆ ಸಂಬಂಧಿಸಿದ ಧ್ವನಿವರ್ಧಕ ಹಾಗೂ ಇತರೆ ಅನುಮತಿ ಪಡೆದುಕೊಳ್ಳಬೇಕು. ಗಣೇಶ ಪೆಂಡಾಲ್‌ಗಳಲ್ಲಿ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳಾದ ಬಲೂನ್, ಪ್ಲಾಸ್ಟಿಕ್ ಸ್ಟಿಕ್‌ಗಳು, ಪ್ಲಾಸ್ಟಿಕ್ ಕ್ಯಾಂಡಿ ಸ್ಟಿಕ್‌ಗಳು, ಪ್ಲಾಸ್ಟಿಕ್ ಐಸ್ ಕ್ರೀಮ್ ಸ್ಟಿಕ್‌ಗಳು, ಅಲಂಕಾರಕ್ಕಾಗಿ ಬಳಸುವ ಪಾಲಿಸ್ಟೈರೀನ್ (ಥರ್ಮೋಕೋಲ್) ಬಳಸದಂತೆ ಅವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಬಿ. ವಿಮಲದಾಸ್ ಸೇವಾ ಪುರಸ್ಕಾರ

ಜಾಗೃತ ಮಹಿಳಾ ಸಂಘ ಹಾಗೂ ಕೌಟುಂಬಿಕ ಸಲಹಾ ಕೇಂದ್ರ ಮತ್ತು ಸ್ವಾಧಾರ ಗೃಹ ಇವರ ವತಿಯಿಂದ ಇಂದು ಬೆಳಿಗ್ಗೆ 11:30 ಕ್ಕೆ ಜಾಗೃತ ಮಹಿಳಾ ಸಂಘದಲ್ಲಿ ಬಿ.ವಿಮಲದಾಸ್ ಸೇವಾ ಪುರಸ್ಕಾರವನ್ನು ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳು : ಪ್ರೊ. ಸಿ. ಹೆಚ್. ಮುರಿಗೇಂದ್ರಪ್ಪ, ಡಾ. ಹೆಚ್. ಎಸ್. ಮಂಜುನಾಥ ಕುರ್ಕಿ.

**ಬಿ. ವಿಮಲದಾಸ್ ಸೇವಾ ಪುರಸ್ಕಾರ ಸನ್ಮಾನಿತರು :** ಶ್ರೀಮತಿ ನೀಲಮ್ಮ ಮಾಗಾನಹಳ್ಳಿ. ಅಧ್ಯಕ್ಷತೆ: ಶ್ರೀಮತಿ ಶಾಂತಮ್ಮ ದಿಳ್ಳೆಪ್ಪ,

### ಓದುಗರ ಪತ್ರ

## ಸ್ವಚ್ಛತಾ ಅಭಿಯಾನ ಕೂಡಲೇ ಆರಂಭಿಸಿ..



ಮಾನ್ಯರೇ,

ದಿನಾಂಕ 29.8.2024ರ 'ಜನತಾವಾಣಿ'ಯಲ್ಲಿ 'ಖಾಲಿ ಇರುವ ನಿವೇಶನ ಸ್ವಚ್ಛ ಗೊಳಿಸದಿದ್ದರೆ ದಂಡ' ಎಂಬ ಸುದ್ದಿ ಪ್ರಕಟವಾಗಿತ್ತು. ಇಂತಹ ಸುದ್ದಿಗಳನ್ನು ಹಲವಾರು ವರ್ಷಗಳಿಂದ ಪತ್ರಿಕೆಯಲ್ಲಿ ಓದುತ್ತಾ ಬಂದಿದ್ದೇನೆ. ಆದರೆ ಖಾಲಿ ನಿವೇಶನದಲ್ಲಿ ಬೆಳೆದು ಪೊದೆಯಂತಾಗಿರುವ ಜಾಲಿ ಗಿಡ, ಮರಗಳನ್ನು ಸ್ವಚ್ಛ ಮಾಡಿಸಿದ್ದನ್ನು ನಾನು ಈವರೆಗೂ ನೋಡಿಲ್ಲ.

ಸಿದ್ದವೀರಪ್ಪ ಬಡಾವಣೆ 9ನೇ ಕ್ರಾಸ್ ನ್ಯಾಯ ಬೆಲೆ ಅಂಗಡಿಗಳ ಎದುರಿಗೆ ಖಾಲಿ ಸೈಟಿನಲ್ಲಿ ಆಳೆತ್ತರಕ್ಕೆ ಗಿಡಮರಗಳು ಬೆಳೆದಿವೆ. ಹಾಗೆಯೇ, 10ನೇ ಕ್ರಾಸ್ ನಲ್ಲಿಯೂ ಮರಗಿಡಗಳು ಬೆಳೆದಿವೆ. ಇದರಿಂದಾಗಿ ಡೆಂಗ್ಯೂ, ಚಿಕನ್ ಗುನ್ಯಾ, ವೈರಲ್ ಫಿವರ್, ಮಾರಕ ರೋಗಗಳು ಹಬ್ಬುವುದಕ್ಕೆ ಮೂಲ ಕಾರಣವಾಗಿದೆ. ಮಹಾನಗರ ಸಭೆಯ ಆಯುಕ್ತರು ನಮ್ಮ ಬಡಾವಣೆಯ ಸಂಬಂಧಪಟ್ಟ ಕಾರ್ಪೊರೇಟರ್‌ಗಳೊಂದಿಗೆ ಚರ್ಚಿಸಿ ಸ್ವಚ್ಛಗೊಳಿಸುವವನ್ನು ಅಭಿಯಾನ ಕೂಡಲೇ ಆರಂಭಿಸಬೇಕು.

**- ರಘುನಾಥರಾವ್ ತಾಪ್ಸೆ,** ನಿವೃತ್ತ ಬ್ಯಾಂಕ್ ಅಧಿಕಾರಿ, ದಾವಣಗೆರೆ.



## ಖೋ-ಖೋ ಪಂದ್ಯಾವಳಿ : ಸಾರಥಿ ಶಾಲಾ ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆ

**ಹರಿಹರ**

ಹರಿಹರ, ಸೆ.1- ನಗರದ ಗಾಂಧಿ ಮೈದಾನದಲ್ಲಿ ಕ್ಲಸ್ಟರ್ ಒನ್ ವಲಯ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದಲ್ಲಿ ಬೆಳ್ಳೂಡಿ ಪಟೇಲ್ ಗುರುಬಸಪ್ಪ ಪ್ರೌಢಶಾಲಾ ಮತ್ತು ಜಿ.ಹೆಚ್.ಎಸ್.ಪ್ರೌಢಶಾಲಾ ಸಾರಥಿ ಶಾಲಾ ವಿದ್ಯಾರ್ಥಿಗಳ ನಡುವೆ ನಡೆದ ಖೋಖೋ ರೋಚಕ ಪಂದ್ಯದಲ್ಲಿ ಸಾರಥಿ ಗ್ರಾಮದ ಜಿ.ಹೆಚ್.ಎಸ್. ಪ್ರೌಢಶಾಲಾ ವಿದ್ಯಾರ್ಥಿಗಳು ಭರ್ಜರಿ ಗೆಲುವು ಸಾಧಿಸಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾದರು.

ಗ್ರಾಮದಿಂದ ಆಟ ನೋಡಲು ಬಂದ ಕ್ರೀಡಾ ಪ್ರೋತ್ಸಾಹಕರು, ಗೆದ್ದಂತಹ ವಿದ್ಯಾರ್ಥಿಗಳನ್ನು ಎತ್ತಿಕೊಂಡು ವಿಜಯೋತ್ಸವದ ಸಂಭ್ರಮ ಆಚರಣೆ ಮಾಡುವುದರೊಂದಿಗೆ ಅಭಿನಂದಿಸಿದರು.

ನಗರದ ಅಂಜುಮಾನ್ ಇಸ್ಲಾಮಿಯಾ ಸಂಸ್ಥೆಯ ವತಿಯಿಂದ ಕ್ರೀಡಾಕೂಟ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ದೈಹಿಕ ಶಿಕ್ಷಕರಾದ ಗಿರಿಯಮ್ಮ ಪ್ರೌಢಶಾಲೆಯ ಹನುಮಂತಪ್ಪ, ಶಿವಮ್ಮ ಪ್ರೌಢಶಾಲೆಯ ಮಲ್ಲಯ್ಯ, ವೀರೇಂದ್ರ ಪ್ರಸಾದ್, ಶೀಲಾ ಕೊಂಡಜ್ಜಿ, ಜ್ಯೋತಿ ರಾಜನಹಳ್ಳಿ, ಅಂಜುಮಾನ್ ಇಸ್ಲಾಮಿಯಾ ಪ್ರೌಢಶಾಲಾ ಶಿಕ್ಷಕ ಮಹಮ್ಮದ್ ಅಲಿ ಹಾಜರಿದ್ದರು.

## ಕಕ್ಕರಗೊಳ್ಳ : 'ಪಟೇಲ್ ವೀರಪ್ಪ ಶಾಲೆಯಲ್ಲಿ' ಮರಳಿ ಅರಳಿದ ಪತ್ರ ಬರಹದ ಸಂಭ್ರಮ



ದಾವಣಗೆರೆ, ಸೆ. 1- ಇಲ್ಲಿಗೆ ಸಮೀಪದ ಕಕ್ಕರಗೊಳ್ಳ ಗ್ರಾಮದ ಪಟೇಲ್ ವೀರಪ್ಪ ಶಾಲೆಯಲ್ಲಿ ಸೆ. 1-ವಿಶ್ವ ಪತ್ರ ಬರವಣಿಗೆ ದಿನದ ಅಂಗವಾಗಿ ಮಕ್ಕಳು ಸಾಮೂಹಿಕವಾಗಿ ತಮ್ಮ ಪ್ರೀತಿ ಪಾತ್ರರಿಗೆ ಪತ್ರ ಬರೆದು ಸಂಭ್ರಮಿಸಿದರು.

ಪತ್ರ ಬರವಣಿಗೆಯ ಪರಿಚಯವೇ ಕಳೆದು ಹೋದ ದಿನಗಳಲ್ಲಿ ಬೆಳೆದ ಈ ಪೀಳಿಗೆಯ ಮಕ್ಕಳಿಗೆ, ಅಂಚೆಯ ಇತಿಹಾಸದ ಮಹತ್ವ ಮತ್ತು ಹಿಂದಿನ ತಲೆಮಾರಿನ ಜನಗಳಿಗೆ ಅಂಚೆ ಇಲಾಖೆ ನೀಡುತ್ತಿದ್ದ ಆತ್ಮೀಯ ಸಂವಹನವನ್ನು ನೆನಪಿಸಿಕೊಡಲಾಯಿತು.

## ಸಿಎಂಗೆ ನ್ಯಾಯ ಸಿಗುವ ವಿಶ್ವಾಸ : ಡಿಬಿ

ದಾವಣಗೆರೆ, ಸೆ.1- ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಒಬ್ಬ ಸ್ವಚ್ಛ ರಾಜಕಾರಣಿ 40 ವರ್ಷಗಳಿಂದ ಶಾಸಕ, ಮಂತ್ರಿ, ಉಪಮುಖ್ಯಮಂತ್ರಿ, ಮುಖ್ಯಮಂತ್ರಿ ಯಾಗಿ ಜನರ ಸೇವೆ ಮಾಡಿದ್ದಾರೆ. ಅವರು ಬಡವರ ಪಾಲಿನ ಭಾಗ್ಯವಿದಾತ, ಹಸಿದವರಿಗೆ ಅನ್ನ ನೀಡಿದ ಅವರಿಗೆ ನಾಳೆ ಹೈ ಕೋರ್ಟ್‌ನಲ್ಲಿ ನ್ಯಾಯ ಸಿಗಲಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹೈಕೋರ್ಟ್‌ನಲ್ಲಿ ನಡೆಯುತ್ತಿರುವ ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ನವರ ಪಾತ್ರ ರೂಪಿಸುವ ಯಾವುದೇ ವಾದವನ್ನು ವಕೀಲರು ನಿರೂಪಿಸಿಲ್ಲ. ಆದುದರಿಂದ ಸಿದ್ದರಾಮಯ್ಯ ಅವರು ಆರೋಪದಿಂದ ಮುಕ್ತರಾಗರಿದ್ದಾರೆ, ಬಿಜೆಪಿ ಜೆಡಿಎಸ್ ಮೋದಿ ಪಾಟಾಲಂ ಗೆ ಕಾಪಾಲ ಮೋಕ್ಷವಾಗಲಿದೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಕಲಚೇತನ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ

ದಾವಣಗೆರೆ, ಸೆ. 1 - ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಮೆಟ್ರಿಕ್ ಪೂರ್ವ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿಕಲಚೇತನ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ವಿಕಲ ಚೇತನರ ಸಹಾಯವಾಣಿ ಮತ್ತು ಮಾಹಿತಿ ಸಲಹಾ ಕೇಂದ್ರ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಚೇರಿ, ದೂ.ಸಂ 08192-263939 ಸಂಪರ್ಕಿಸಬಹುದು ಎಂದು ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ಇನ್ಫೋಟೆಕ್ ಕಂಪ್ಯೂಟರ್ ತರಬೇತಿ ಕೇಂದ್ರದ ರಜತ ಮಹೋತ್ಸವ ಯಶಸ್ವಿ



ದಾವಣಗೆರೆ, ಸೆ.1- ನಗರದ ಹೊರ ವಲಯದ ಕಾರಿಗನೂರು ಕ್ರಾಸ್ ಬಳಿಯ ಇನ್ಫೋಟೆಕ್ ಕಂಪ್ಯೂಟರ್ ತರಬೇತಿ ಕೇಂದ್ರದ ರಜತ ಮಹೋತ್ಸವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಕಳೆದ 25 ವರ್ಷಗಳಲ್ಲಿ 5 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಕಂಪ್ಯೂಟರ್ ತರಬೇತಿ ಪಡೆದಿರುವುದು ಹೆಮ್ಮೆಯ ವಿಚಾರ ಎಂದು ತರಬೇತಿ ಕೇಂದ್ರದ ಸಂಸ್ಥಾಪಕರಾದ ಅನಿತಾ ಕಲ್ಯಾಣ್ ಕುಮಾರ್ ತಿಳಿಸಿದರು.

ಕಂಪ್ಯೂಟರ್ ಕಲಿಕೆಗೆ ಬೇಕಾದ ಪೂರಕ ವಾತಾವರಣ ಹೊಂದಿದೆ ಎಂದು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ತೇಜಸ್ವಿ ವಿ. ಪಟೇಲ್ ಹೇಳಿದರು.

ಈ ವೇಳೆ ಗ್ರಾ.ಪಂ ಮಾಜಿ ಸದಸ್ಯ ಹೆಚ್.ವಿ. ಶಿವಕುಮಾರ್, ಹೆಚ್.ಕೆ. ವಿರೂಪಾಕ್ಷಪ್ಪ, ಹೆಚ್.ಕೆ. ಮಾಧವ ಮತ್ತು ವಿದ್ಯಾರ್ಥಿಗಳಿದ್ದರು.

## ಕೊಟ್ಟೂರು ಪ.ಪಂ ಅಧ್ಯಕ್ಷರಾಗಿ ರೇಖಾ, ಉಪಾಧ್ಯಕ್ಷರಾಗಿ ಸಿದ್ದಯ್ಯ



ಕೊಟ್ಟೂರು, ಸೆ. 1 - ಹಲವು ದಿನಗಳಿಂದ ಮುಂದೂಡಲ್ಪಟ್ಟಿದ್ದ ಕೊಟ್ಟೂರು ಪಟ್ಟಣ ಪಂಚಾಯಿತಿಯ 2ನೇ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆ ನಡೆಯಿತು.

ಕಾಂಗ್ರೆಸ್‌ನಿಂದ 9 ಜನ ಸದಸ್ಯರು ಆಯ್ಕೆಯಾಗಿ, ಪರಿಶಿಷ್ಟ ಜಾತಿ ಜನಾಂಗದವರಿದ್ದರೂ ಸಹ ಅಧ್ಯಕ್ಷ ಸ್ಥಾನಕ್ಕೆ ಪಕ್ಷೇತರರಾಗಿ ಗೆದ್ದಿರುವ ರೇಖಾ ಅವರು ಆಯ್ಕೆಯಾಗುವ ಮೂಲಕ ವಿಚಿತ್ರ ಸನ್ನಿವೇಶಕ್ಕೆ ಸಾಕ್ಷಿಯಾಯಿತು. ರೇಖಾರವರಿಗೆ ಸೂಚಕರಾಗಿ 11ನೇ ವಾರ್ಡ್‌ನ ಸದಸ್ಯೆ ಕೆ. ಸಾವಿತ್ರಮ್ಮ ಸೂಚಕರಾಗಿದ್ದರೆ, 15ನೇ ವಾರ್ಡ್‌ನ ಸದಸ್ಯೆ ಕೆ. ಲಕ್ಷ್ಮಿ ಅನುಮೋದಕರಾಗಿದ್ದರು.

ಉಪಾಧ್ಯಕ್ಷ ಸ್ಥಾನಕ್ಕೆ ಬಿ.ಜೆ.ಪಿ.ಯ ಸಿದ್ದಯ್ಯನವರಿಗೆ 7ನೇ ವಾರ್ಡ್‌ನ ಬಿಜೆಪಿ ಸದಸ್ಯ ಕೆ.ಎಸ್. ಈಶ್ವರಗೌಡ ಸೂಚಕರಾದರೆ, 8ನೇ ವಾರ್ಡ್ ಬಿಜೆಪಿ ಸದಸ್ಯ ಬೋರ್‌ವೆಲ್ ತಿಪ್ಪೇಸ್ವಾಮಿ ಅನುಮೋದಕರಾಗಿದ್ದರು. ಒಟ್ಟಿನಲ್ಲಿ ಅಧ್ಯಕ್ಷ ಉಪಾಧ್ಯಕ್ಷರು ಅವಿರೋಧವಾಗಿ ಆಯ್ಕೆಯಾದರು.

# ಪಾದಯಾತ್ರೆ ಯೋಗದ ಒಂದು ಭಾಗವಾಗಿದೆ




ದಾವಣಗೆರೆ, ಸೆ.1- ನಡಿಗೆ, ಯೋಗಾಭ್ಯಾಸದಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ಪಾದಯಾತ್ರೆಯೂ ಕೂಡ ಯೋಗದ ಒಂದು ಭಾಗವಾಗಿದೆ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಚೌಕಿ ಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದದಿಂದ ಮಾಗಾನಹಳ್ಳಿ ಸಮೀಪದ ಕೋಡಿ ಕ್ಯಾಂಪಿನ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ದೇವಸ್ಥಾನಕ್ಕೆ ಭಾನುವಾರ ಮುಂಜಾನೆ ಆಯೋಜಿಸಿದ್ದ ಪಾದಯಾತ್ರೆಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶ್ರೀಗಳು ಆಶೀರ್ವಚನ ನೀಡಿದರು.

ಪಾದ ಎಂದರೆ ಜ್ಞಾನ-ಕ್ರಿಯೆಗಳ ಸಂಗಮ. ಈ ಜ್ಞಾನ, ಕ್ರಿಯೆಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಜೀವನ ಯಾತ್ರೆಯನ್ನು ಯಶಸ್ವಿಗೊಳಿಸುವುದೇ ನಿಜವಾದ ಪಾದಯಾತ್ರೆ ಎಂದು ಹೇಳಿದರು.

ಜ್ಞಾನದ ಜತೆಗೆ ಕ್ರಿಯೆಯು ಇದ್ದರೆ ಜೀವನ ಪರಿಪೂರ್ಣವಾಗುತ್ತದೆ. ಪಾದಯಾತ್ರೆ ಮಾಡುವ ಮೂಲಕ ಅಂತರಂಗದ ಯಾತ್ರೆ ಮಾಡಬೇಕಿದೆ ಮತ್ತು ಅಂತರಂಗವನ್ನು ಶುದ್ಧಿ ಮಾಡುವುದೇ ನಿಜವಾದ ಪಾದಯಾತ್ರೆ ಎಂದು ತಿಳಿಸಿದರು.

ಶ್ರಾವಣ ಮಾಸದ ಹಿನ್ನೆಲೆಯಲ್ಲಿ ಸಮೀಪದ ಮಾಗಾನಹಳ್ಳಿ ಬಳಿಯ ಕೋಡಿ ಕ್ಯಾಂಪಿನ ಕೊಟ್ಟೂರು ಬಸವೇಶ್ವರ ದೇವಸ್ಥಾನಕ್ಕೆ ಪಾದಯಾತ್ರೆ ಹೋಗಬೇಕು ಎಂಬ ಸಂಕಲ್ಪ ಪ್ರತಿ ವರ್ಷವೂ ನಡೆಯಲಿ ಎಂದು ಆಶಿಸಿದರು.

ಇದೇ ವೇಳೆ ಮಾಧ್ಯಮ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಚನ್ನಬಸವ ಶೀಲವಂತ್‌ರನ್ನು ಸನ್ಮಾನಿಸಿದರು.

ಯೋಗ ಒಕ್ಕೂಟದ ಜಿಲ್ಲಾಧ್ಯಕ್ಷ ವಾಸುದೇವ ರಾಯ್ಕರ್, ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟಿನ ಅಧ್ಯಕ್ಷ ಕಣಕುಪ್ಪಿ ಮುರುಗೇಶಪ್ಪ, ಕಣಕುಪ್ಪಿ ಕರಿಬಸಪ್ಪ, ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳುವಯ್ಯ, ಉತ್ತಂಗಿ ಪ್ರಕಾಶ, ತೀರ್ಥರಾಜ ಹೋಲೂರು, ರಾಜು ಎಲ್. ಬದ್ದಿ, ಪರಶುರಾಮ, ನಾಗರಾಜ, ಮಾದೇಗೌಡರು, ಬಾದಾಮಿ ಜಯಣ್ಣ, ನಿರಂಜನ ಅಣಬೂರು ಮಠ, ಚಂದ್ರು ಸೇರಿದಂತೆ ಯೋಗ ಒಕ್ಕೂಟದ ಸದಸ್ಯರು, ಕೊಟ್ಟೂರೇಶ್ವರ ಸ್ವಾಮಿ ಭಕ್ತರು ಇದ್ದರು.

ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್, ಸರ್ವ ಯೋಗ ಕೇಂದ್ರಗಳು, ಲಯನ್ಸ್ ಕ್ಲಬ್ ಹಾಗೂ ಜಿಲ್ಲಾ ಯೋಗ ಒಕ್ಕೂಟದ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಿತು.

## ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಸೆ. 1- ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ನೀಡಲು ಕ್ರೀಡಾ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಇದೇ ದಿನಾಂಕ 10 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ಸ್ಟೇಡಿಯಂ, ದಾವಣಗೆರೆ ಇಲ್ಲಿಗೆ ಅರ್ಜಿ ಸಲ್ಲಿಸಲು ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

## ಅಭಿನಂದನೆಗಳು




ದಾವಣಗೆರೆ ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯುತ್ ಮತ್ತು ವಿದ್ಯುನ್ಮಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಬಿ.ಎಂ. ನಂದೀಶ್** ಅವರಿಗೆ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯವು ಪಿ.ಎಚ್‌ಡಿ. ಪದವಿ ಪ್ರದಾನ ಮಾಡಿದೆ. ಇವರು ವಿದ್ಯುತ್ ಮತ್ತು ವಿದ್ಯುನ್ಮಾನ ವಿಭಾಗದ ಪ್ರಾಧ್ಯಾಪಕ **ಡಾ. ಪುಷ್ಪರಾಜ್** ಅವರ ಮಾರ್ಗದರ್ಶನದಲ್ಲಿ 'ಡಿಸೈನ್ ಅಂಡ್ ಸಿಮ್ಯುಲೇಷನ್ ಆಫ್ ಇಂಟಲಿಜೆಂಟ್ ಐಒಟಿ ಬೇಸ್ಡ್ ಫಾರ್ ಇಂಪ್ರೂವಿಂಗ್ ಮೈಕ್ರೋಗ್ರಿಡ್ ಎಪಿಸಿಯನ್ಸಿ' ವಿಷಯದ ಮೇಲೆ ಮಂಡಿಸಿದ ಮಹಾ ಪ್ರಬಂಧಕ್ಕೆ ಪಿ.ಎಚ್‌ಡಿ ಪದವಿ ನೀಡಿ ಗೌರವಿಸಿದೆ.

**ಡಾ. ಬಿ.ಎಂ. ನಂದೀಶ್ ಅವರಿಗೆ ಶುಭ ಕೋರುವವರು :**

✦ ನಟರಾಜ್ ಬಿ.ಎಸ್. ✦ ಮುರುಗೇಂದ್ರಪ್ಪ ಬಿ.
✦ ಎಸ್.ಕೆ. ರವಿ ✦ ಎಸ್.ಹೆಚ್. ಕುಮಾರ್ ✦ ಜಿ. ಮೋಹನ್
✦ ಸೋಮಶೇಖರ್ ಬಿ.ಎಂ. ✦ ಉಮೇಶ್ ಎಂ.
✦ ರಾಜೇಶ್ವರಿ ಬಿ.ಎನ್. ✦ ಜೀವನ್ ಬಿ.ಎನ್. ✦ ಸಹನ

# ಹಸಿದವರಿಗೆ ಅನ್ನ ನೀಡಿದರೆ ದೇವರು ಸಂತೃಪ್ತಿ : ಬಸವಪ್ರಭು ಶ್ರೀ

## ಪದ್ಮಶ್ರೀ ಚಿಂದೋಡಿ ಲೀಲಾ ಅವರ ನಿರ್ಮಾಣದ ಶ್ರೀ ಸೋಮೇಶ್ವರ ದೇವಸ್ಥಾನದ ನೂತನ ಪ್ರಸಾದ ನಿಲಯದ ಉದ್ಘಾಟನಾ ಕಾರ್ಯಕ್ರಮ




ದಾವಣಗೆರೆ, ಸೆ.1- ಹಸಿದವರಿಗೆ ಅನ್ನ ನೀಡುವ ಮೂಲಕ ದೇವರನ್ನು ಸಂತೃಪ್ತಿ ಗೊಳಿಸಲು ಸಾಧ್ಯ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಮಹಾಸ್ವಾಮೀಜಿ ಹೇಳಿದರು.

ನಗರದ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಭಾನುವಾರ ಪದ್ಮಶ್ರೀ ಚಿಂದೋಡಿ ಲೀಲಾ ಅವರ ನಿರ್ಮಾಣದ ಶ್ರೀ ಸೋಮೇಶ್ವರ ದೇವಸ್ಥಾನದ ನೂತನ ಪ್ರಸಾದ ನಿಲಯದ ಉದ್ಘಾಟನೆ, ಶ್ರೀ ಕರಿಬಸವೇಶ್ವರ ಸ್ವಾಮಿ ಪ್ರಸಾದ ನಿಲಯ ಹಾಗೂ 100 ಜನ ಜ ಂಗಮರ ಲಿಂಗ ಪೂಜೆ ಹಾಗೂ ಸನ್ಮಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಈಗ ಹಸಿವು ಮುಕ್ತ ರಾಜ್ಯಕ್ಕಾಗಿ ಅನ್ನ ಭಾಗ್ಯ ಯೋಜನೆ ಜಾರಿಗೆ ತಂದಿದೆ. ಆದರೆ ಹನ್ನೆರಡನೇ ಶತಮಾನದಲ್ಲಿಯೇ ಬಸವಣ್ಣನವರು ಹಸಿವು ಮುಕ್ತ ಸಮಾಜ ನಿರ್ಮಿಸಲು ದಾಸೋಹ ತತ್ವ ಆರಂಭಿಸಿದ್ದರು ಎಂದರು.

ಬಸವಣ್ಣನವರು ಅನುಭವ ಮಂಟಪ ನಿರ್ಮಿಸಿ ಪ್ರತಿ ದಿನವೂ ಲಕ್ಷಾಂತರ ಜಂಗಮರಿಗೆ ಅನ್ನ ದಾಸೋಹ ಮಾಡುತ್ತಿದ್ದರು. ಅದೇ ಪರಂಪರೆಯನ್ನು ಲಿಂಗಾಯತ ಮಠಗಳೂ ಮುಂದುವರೆಸಿಕೊಂಡು ಬಂದಿವೆ. ಅಷ್ಟೇ ಅಲ್ಲ, ಕೆಲವು ಲಿಂಗಾಯತ ಮನೆತನಗಳೂ ಅಂತಹ ಶ್ರೇಷ್ಠ ಕಾರ್ಯ ಪಾಲಿಸುತ್ತಾ ಬಂದಿವೆ. ಅವುಗಳಲ್ಲಿ ಚಿಂದೋಡಿ ಶಾಂತವೀರಪ್ಪ ಅವರ ಮನೆತನವೂ ಒಂದು ಎಂದು ಹೇಳಿದರು.

ನೂರು ವರ್ಷಗಳ ಹಿಂದೆಯೇ ಚಿಂದೋಡಿ ಮನೆ ತನದ ಶಾಂತವೀರಪ್ಪ ಹಾಗೂ ಶಾಂತಮ್ಮ ದಾಸೋಹ ಕಾರ್ಯ ಆರಂಭಿಸಿದ್ದರು. ಅಂದಿನ ಮುರುಘಾ ಮಠದ ಶ್ರೀ ಜಯದೇವ ಜಗದ್ಗುರುಗಳನ್ನು 1924ರಲ್ಲಿ ಆಮಂತ್ರಿಸಿ ಅವರಿಗೆ ಪಾದ ಪೂಜೆ ಮಾಡುವ ಮೂಲಕ ಚಾಲನೆ ನೀಡಿದ್ದು ಇತಿಹಾಸ.

ಅದೇ ಪರಂಪರೆಯನ್ನು ಚಿಂದೋಡಿ ಶಾಂತವೀರಪ್ಪ ಅವರ ಮಕ್ಕಳು ಹಾಗೂ ಮೊಮ್ಮಕ್ಕಳು ನಡೆಸಿಕೊಂಡು ಬರುವ ಮೂಲಕ ದೇವರಿಗೆ ತಮ್ಮ ನಿಜ ಭಕ್ತಿಯನ್ನು ಅರ್ಪಿಸುತ್ತಿರುವುದು ಶ್ಲಾಘನೀಯ. ಅವರ ಈ ಕಾರ್ಯ ಎಲ್ಲರಿಗೂ ಮಾದರಿಯಾಗಿದೆ ಎಂದು ಹೇಳಿದರು.

ಆಂಧ್ರ ಪ್ರದೇಶದ ಉರುಗಾದ್ರಿ ಗವಿಮಠ ಸಂಸ್ಥಾನದ ಜಗದ್ಗುರು ಡಾ. ಕರಿಬಸವರಾಜೇಂದ್ರ ಸ್ವಾಮೀಜಿ, ಕುಮಾರಟ್ಟಣಂ ಪುಣ್ಯಕೋಟಿ ಮಠದ ಶ್ರೀ ಬಾಲಯೋಗಿ ಶ್ರೀ ಜಗದೀಶ್ವರ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಚಿಂದೋಡಿ ಎಲ್.ಚಂದ್ರಧರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜ್ಞಾನೇಶ್ವರ ಜವಳಿ ನಿರೂಪಿಸಿದರು.

## ಹರಿಹರ : ಶ್ರೀ ಸಿದ್ಧಾರೂಢ ಸ್ವಾಮಿಗಳ ಕಥಾಮೃತ ಮುಕ್ತಾಯ ಸಮಾರಂಭ



ಹರಿಹರ, ಸೆ. 1 -ಇಲ್ಲಿನ ಕುರುಬರ ಬೀದಿಯಲ್ಲಿರುವ ಶ್ರೀ ಸಿದ್ಧಾರೂಢ ಭಕ್ತ ಮಂಡಳಿ ಇವರ ಆಶ್ರಯದಲ್ಲಿ ನಡೆಯುವ ಹೊಸಪೇಟೆ ಬೀದಿಯ ಶ್ರೀ ಗ್ರಾಮದೇವತೆ ಸಮುದಾಯ ಭವನದಲ್ಲಿ ನಾಡಿದ್ದು ದಿನಾಂಕ 3ರ ಮಂಗಳವಾರ ಸಂಜೆ 6 ಗಂಟೆಗೆ ಶ್ರೀ ಸಿದ್ಧಾರೂಢ ಸ್ವಾಮಿಗಳವರ ಕಥಾಮೃತ ಶ್ರಾವಣದ 35ನೇ ವರ್ಷದ ಮುಕ್ತಾಯ ಸಮಾರಂಭ ನಡೆಯಲಿದೆ.

ದಿವ್ಯ ಸಾನ್ನಿಧ್ಯವನ್ನು ಹರಿಹರ ಸದ್ಗುರು ಶ್ರೀ ಬ್ರಹ್ಮಾನಂದ ಮಠದ ಶ್ರೀ ಅಭಿನವ ಕೃಪಾನಂದ ಭಾರತಿ ಸ್ವಾಮೀಜಿ, ಪೂಜ್ಯ ಶ್ರೀ ನೀಲಕಂಠಪ್ಪ ಅಗಡಿ, ಮಲ್ಲಿಕಾರ್ಜುನ ದೇವಾಂಗದ, ಮಂಜಯ್ಯ ಒಡೆಯರ್, ಹನುಮಂತಪ್ಪ ಅವಧೂತರು ವಹಿಸುವರು.

ಮುಖ್ಯ ಅತಿಥಿಗಳಾಗಿ ರಾಮಚಂದ್ರ ಕಲಾಲ್, ಶ್ರೀ ವಿವೇಕಾನಂದ ಸ್ವಾಮಿ, ಶ್ರೀಮತಿ ಪಕ್ಕೀರಮ್ಮ ಹುಲಿಕಟ್ಟಿ, ಜಕ್ಕವ್ವರ ರೇವಣಸಿದ್ದಪ್ಪ, ಕೆ. ಜಡಿಯಪ್ಪ, ಡಾ. ಶಂಕರೋಜಿ ರಾವ್ ಎಂ.ಎಸ್ ಮತ್ತು ಇತರರು ಭಾಗವಹಿಸುವರು.

**ಸಂಗೀತ ಸೇವೆ:** ಮೌನೇಶ್ ಬಡಿಗೇರ್, ಶ್ರೀ ಶಿವಾನಂದಪ್ಪ, ಕಾಶಿನಾಥಾಚಾರ್, ಧನಂಜಯ ಆಚಾರ್ ನಡೆಸಿಕೊಡಲಿದ್ದಾರೆ ಎಂದು ಶ್ರೀ ಸಿದ್ಧಾರೂಢ ಭಕ್ತ ಮಂಡಳಿಯ ಮೂಗಿನವರ ಕೆ. ಹನುಮಂತಪ್ಪ (99640 18679) ತಿಳಿಸಿದ್ದಾರೆ.

## ಗಂಗನರಸಿಯಲ್ಲಿ ಇಂದು ಬೆನಕನ ಅಮಾವಾಸ್ಯೆ ವಿಶೇಷ ಪೂಜೆ



ಹರಿಹರ ತಾಲ್ಲೂಕಿನ ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಹೊರ ಮಠದಲ್ಲಿ ಬೆನಕನ ಅಮಾವಾಸ್ಯೆಯ ವಿಶೇಷ ಪೂಜಾ ಕಾರ್ಯಕ್ರಮಗಳು ಇಂದು ಬೆಳಿಗ್ಗೆ 11ಕ್ಕೆ ನಡೆಯಲಿವೆ.

ಬೆಳಿಗ್ಗೆ 11 ಗಂಟೆಗೆ ಶ್ರೀ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ಅಮಾವಾಸ್ಯೆಯ ವಿಶೇಷ ಪೂಜೆ, ಅಭಿಷೇಕ, ಮಹಾಮಂಗಳಾರತಿ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆ ಜರುಗುವುದು.

ಕಂಚಿಕೇರಿ ದಿ|| ಚಂದ್ರಪ್ಪ ಮತ್ತು ಮಕ್ಕಳು ಹಾಗೂ ಸಹೋದರರು, ಶ್ರೀ ರೇವಣಸಿದ್ದೇಶ್ವರ ಎಲೆಕ್ಟ್ರಿಕಲ್ಸ್ (ದಾವಣಗೆರೆ) ಇವರು ಪ್ರಸಾದ ವ್ಯವಸ್ಥೆ ಏರ್ಪಡಿಸಿದ್ದಾರೆ. ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ ಹಾಗೂ ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿ ಆಶ್ರಯ ದಲ್ಲಿ ಕಾರ್ಯಕ್ರಮಗಳು ನಡೆಯಲಿವೆ ಎಂದು ಅಧ್ಯಕ್ಷ ಜಿ.ಎಂ. ನಾಗೇಂದ್ರಪ್ಪ, ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ಬಿಎಂಟಿಸಿ ಕಂಡಕ್ಟರ್ ನೇಮಕಾತಿ ಪರೀಕ್ಷೆ:1872 ಅಭ್ಯರ್ಥಿಗಳು ಹಾಜರು

ದಾವಣಗೆರೆ, ಸೆ. 1 - ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿನ ಕಂಡಕ್ಟರ್ ಹುದ್ದೆಗಳ ನೇಮಕಾತಿಗೆ ಸೆಪ್ಟೆಂಬರ್ 1 ರಂದು ಸ್ಪರ್ಧಾತ್ಮಕ ಪರೀಕ್ಷೆ ದಾವಣಗೆರೆ ನಗರದ 4 ಕೇಂದ್ರಗಳಲ್ಲಿ ನಡೆಯಿತು.

ಒಟ್ಟು 2209 ಅಭ್ಯರ್ಥಿಗಳು ನೋಂದಾಯಿಸಿದ್ದು, ಬೆಳಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ ಮೊದಲ ಪತ್ರಿಕೆ ಪರೀಕ್ಷೆಗೆ 1872 ಹಾಜರಾಗಿ 337 ಗೈರಾಗಿದ್ದರು. ಮಧ್ಯಾಹ್ನ 2.30 ರಿಂದ ಸಂಜೆ 4.30 ರವರೆಗೆ ನಡೆದ ಎರಡನೇ ಪತ್ರಿಕೆಯ ಪರೀಕ್ಷೆಗೆ 1873 ಅಭ್ಯರ್ಥಿಗಳು ಹಾಜರಾಗಿ 336 ಅಭ್ಯರ್ಥಿಗಳು ಗೈರು ಹಾಜರಾಗಿರುವರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ ತಿಳಿಸಿದ್ದಾರೆ.

## ಶ್ರೀ ಕ್ಷೇತ್ರ ಶಿಬಾರ ಮೈಲಾರ ಲಿಂಗೇಶ್ವರ ಸ್ವಾಮಿಯ ಪಲ್ಲಕ್ಕಿ ಮೆರವಣಿಗೆ



ದಾವಣಗೆರೆ, ಸೆ.1- ಸ್ಥಳೀಯ ಶ್ರೀ ಕ್ಷೇತ್ರ ಶಿಬಾರ ಮೈಲಾರ ಲಿಂಗೇಶ್ವರ ದೇವಸ್ಥಾನ ಟ್ರಸ್ಟ್ ವತಿಯಿಂದ ಶ್ರಾವಣ ಮಾಸದ ಪ್ರಯುಕ್ತ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ಪಲ್ಲಕ್ಕಿಯನ್ನು ನಗರದ ರಾಜಬೀದಿಯಲ್ಲಿ ಅದ್ಧೂರಿ ಮೆರವಣಿಗೆ ನಡೆಸಲಾಯಿತು.

ಶ್ರೀ ಮುರಳೀಧರ ಸ್ವಾಮಿ ಅವರು ಚಾಲನೆ ನೀಡಿದರು. ಟ್ರಸ್ಟ್ ಅಧ್ಯಕ್ಷ ಕೆ.ಹೆಚ್.ಮಲ್ಲೇಶ್, ಖಜಾಂಚಿ ಜಯಣ್ಣ, ಕಾರ್ಯದರ್ಶಿ ಈರಣ್ಣ, ಸಹ ಕಾರ್ಯದರ್ಶಿ ಗೋಪಾಲ್ ರಾವ್ ಸಾವಂತ್ ಮತ್ತು ಪಂಚಣ್ಣ ಹಾಗೂ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿ, ಯಶಸ್ವಿಯಾಗಿ ನಡೆಸಿದರು.

# ಲಿಂಗ ಸಂಸ್ಕಾರದಿಂದ ಲಿಂಗಾಯತರಾಗಬಹುದು

## ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದನೆ




ಸಾಣೇಹಳ್ಳಿ, ಸೆ.1- ಹುಟ್ಟಿನಿಂದಲೇ ಲಿಂಗಾಯತ ಆಗುವುದಿಲ್ಲ. ಲಿಂಗ ಸಂಸ್ಕಾರದಿಂದ ಮಾತ್ರ ಯಾರು ಬೇಕಾದರೂ ಲಿಂಗಾಯತರಾಗ ಬಹುದು ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾ ರಾಧ್ಯ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದಿಸಿದರು.

ಇಲ್ಲಿನ ಗುರುಬಸವ ಮಹಾಮನೆಯಲ್ಲಿ ಭಾನುವಾರ ಏರ್ಪಡಿಸಿದ್ದ ಇಷ್ಟಲಿಂಗ ದೀಕ್ಷಾ ಸಂಸ್ಕಾರ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಬಹುತೇಕ ಧರ್ಮದಲ್ಲಿ ಗುರು ಮತ್ತು ದೇವರಿದ್ದಾರೆ, ಜಂಗಮ ಇಲ್ಲ. ಆದರೆ ಲಿಂಗಾಯತ ಧರ್ಮದಲ್ಲಿ ಜಂಗಮ ತತ್ವವಿದೆ. ಈ ಜಂಗಮರು ಅರಿವು, ಆಚಾರ ಹೊಂದಿದವರು ಮತ್ತು ಸರಿಯಾದ ಮಾರ್ಗದಲ್ಲಿ ಮುನ್ನಡೆಸಿಕೊಂಡು ಹೋಗುವರು ಎಂದರು.

12ನೇ ಶತಮಾನದ ಬಸವಣ್ಣ ತನ್ನ ಮೂಲ ಜನಿವಾರ ಸಂಸ್ಕೃತಿಯನ್ನು ಪ್ರಶ್ನಿಸಿ ಕೂಡಲಸಂಗ ಮದಲ್ಲಿ ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಂಡು, ದೇವರ ಹೆಸರಿನಲ್ಲಿ ಶೋಷಣೆಗೊಳಪಡಿಸುವ ಪೂಜಾರಿ ಮತ್ತು ಪುರೋಹಿತರಿಂದ ಜನರನ್ನು ರಕ್ಷಿಸಲು ಅಂಗೈಯಲ್ಲಿ ಇಷ್ಟಲಿಂಗ ಕರುಣಿಸಿದರು ಎಂದರು.

ಭಗವಂತ ಇಲ್ಲದಿರುವ ಜಾಗವೇ ಇಲ್ಲ. ನಮ್ಮೆಲ್ಲರ ಅಂತರಂಗದಲ್ಲಿ ಶಿವಚೈತನ್ಯವಿದೆ. ಅದನ್ನು ತೋರಿಸುವುದಕ್ಕೆ ಒಬ್ಬ ಗುರು ಬೇಕು ಎಂದು ತಿಳಿಸಿದರು.

ಇದೇ ವೇಳೆ 22 ಜನ ಇಷ್ಟಲಿಂಗ ದೀಕ್ಷಾ ಸಂಸ್ಕಾರ ಪಡೆದುಕೊಂಡರು. ಹೆಚ್.ಎಸ್. ನಾಗರಾಜ ವಚನ ಗಾಯನ ಮಾಡಿದರು. ಸಿರಿಮಠ ಹಾಗೂ ರಮೇಶ್ ಪೂಜೆಯ ವ್ಯವಸ್ಥೆ ಮಾಡಿದರು. ಮುಖ್ಯೋಪಾಧ್ಯಾಯ ಬಿ.ಎಸ್. ಶಿವಕುಮಾರ್ ಇದ್ದರು.

## ನಗರದಲ್ಲಿ ನಾಳೆ ಶ್ರೀ ಲಿಂಗೇಶ್ವರ ಸ್ವಾಮಿಯ ರಥೋತ್ಸವ




ದಾವಣಗೆರೆ, ಸೆ. 1 - ನಗರದ ಅಶೋಕ ರಸ್ತೆ ರೈಲ್ವೆ ಕ್ರಾಸ್ ಬಳಿ ಇರುವ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 3ರ ಮಂಗಳವಾರ ಶ್ರೀ ಲಿಂಗೇಶ್ವರ ಸ್ವಾಮಿಯ ರಥೋತ್ಸವ ನಡೆಯಲಿದೆ.

ಅಂದು ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿಗೆ ಮಹಾ ರುದ್ರಾಭಿಷೇಕ, ಪ್ರಸಾದ ವಿನಿಯೋಗ ನಂತರ ಬೆಳಿಗ್ಗೆ 9.30 ಗಂಟೆಯಿಂದ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವವನ್ನು ಏರ್ಪಡಿಸಲಾಗಿದೆ.

ಉತ್ಸವವು ದೇವಸ್ಥಾನದಿಂದ ಆರಂಭಗೊಂಡು, ಮಹಾತ್ಮ ಗಾಂಧಿ ವೃತ್ತ, ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತ, ಕುವೆಂಪು ರಸ್ತೆ ಮುಖಾಂತರ ಪಿ.ಬಿ. ರಸ್ತೆಯಿಂದ ಶ್ರೀ ಲಿಂಗೇಶ್ವರ ದೇವಸ್ಥಾನಕ್ಕೆ ಬರುತ್ತದೆ. ಭಕ್ತಾದಿಗಳು ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಲಿಂಗೇಶ್ವರ ದೇವಸ್ಥಾನದ ಸಂಘ ಮನವಿ ಮಾಡಿದೆ.

## ಶ್ಯಾಬನೂರಿನಲ್ಲಿ ಇಂದು ಪರವು



ದಾವಣಗೆರೆ - ಶ್ಯಾಬನೂರಿನ ಶ್ರೀ ಈಶ್ವರ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವರುಗಳ ಪರವು ಕಾರ್ಯಕ್ರಮವು ಇಂದು ಮಧ್ಯಾಹ್ನ 2 ರಿಂದ ರಾತ್ರಿ 10.30ರವರೆಗೆ ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.


**REQUIRED**

Young lady with minimum SSLC qualification required to **take care of two and half year boy.**

***Apply with biodata with reference***
***Contact no. : 96861 95323***
**Shanthala, Chamrajpet Davangere.**











KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas